# ಹಂಪಿ ಟೈಮ್ಸ್

HAMPI TIMES

ಕನ್ನಡ ದಿನಪತ್ರಿಕೆ
KANNADA DAILY

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

epaper.hampitimes.com | e-mail: hampitimes@gmail.com | M:94486 33038 Reg.No.PMG/KA/NK/BLY/01/2024-2026

ಸಂಪುಟ:02 Volume:02 • ಸಂಚಿಕೆ: 168 Issue: 168 • ಪಿ.ಆರ್.ಜಿ.ಐ.ನಂ.:KARKAN/2023/88055 PRGI No:KARKAN/2023/88055 • ವಿಜಯನಗರ VIJAYANAGARA • 04.01.2025 • ಶನಿವಾರ Saturday • ಪುಟ:04 Page:04 • ಬೆಲೆ:2 Rs:2



BOOK YOUR ADVERTISEMENTS TO REACH MORE READERS

1,00,000+ Digital E-PAPER READERS

M: 94486 33038

Book Advance Get More Benefits



No.1 HAMPI TIMES LEADING VIJAYANAGARA District News Paper


**ಶಿಕ್ಷಣದ ಗುಣಮಟ್ಟ ಹೆಚ್ಚಿಸಲು ತ್ರಿಸೂತ್ರಗಳು**

1. ಶಾಲೆಗೆ ಹೋಗದ ಶಿಕ್ಷಕರನ್ನು (Drop out teachers) ಶಾಲೆಗೆ ಕಳುಹಿಸಿ
2. ಶಾಲೆಗೆ ಹೋದ ಶಿಕ್ಷಕರನ್ನು ತರಗತಿಗೆ ಕಳಿಸಿ
3. ತರಗತಿಗೆ ಹೋದ ಶಿಕ್ಷಕರಿಂದ ಪಾಠ ಮಾಡಿಸಿ..

– ಮಹಿಮ


**ಸುದ್ದಿ, ಜಾಹೀರಾತು**

ಸುದ್ದಿ, ಜಾಹೀರಾತು, ಜಾಗೃತಿ ಪ್ರಕಟಣೆಗಳಿಗಾಗಿ ಈ ಕೆಳಗಿನ ಕಚೇರಿ ವಿಳಾಸ ಸಂಪರ್ಕಿಸಿ

ವಾಲ್ಮೀಕಿ ಸರ್ಕಲ್ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.

94486 33038

Email: hampitimes@gmail.com


# ಹಂಪಿ ಉತ್ಸವದ ಲೋಗೋ ರಚಿಸಿ-ಬಹುಮಾನ ಗೆಲ್ಲಿ ಸಾಂಸ್ಕೃತಿಕ ಆಸಕ್ತ ಕಲಾವಿದರಿಂದ ಅರ್ಜಿ ಆಹ್ವಾನ

## ಡಿಸಿ ಎಂ.ಎಸ್.ದಿವಾಕರ್ ಹೇಳಿಕೆ | ಜ.15 ರೊಳಗೆ ಲೋಗೊ | ಜ.30 ಕಲಾವಿದರ ಅರ್ಜಿ ಸಲ್ಲಿಕೆಗೆ ಕೊನೆದಿನ

■ **ಹಂಪಿ ಟೈಮ್ಸ್ ಹೊಸಪೇಟೆ**

ಫೆ.28 ರಿಂದ ಸಾಂಪ್ರದಾಯಿಕ ಹಾಗೂ ಅದ್ದೂರಿಯಾಗಿ ಜರುಗಲಿರುವ ವಿಶ್ವವಿಖ್ಯಾತ 2025ರ ಹಂಪಿ ಉತ್ಸವಕ್ಕೆ ವಿನೂತನ ಲೋಗೋ ರಚಿಸಿ ಸಲ್ಲಿಸುವ ಕಲಾವಿದರಿಗೆ ಜಿಲ್ಲಾಡಳಿತದಿಂದ ಸೂಕ್ತ ಬಹುಮಾನ ನೀಡಲಾಗು ವುದು ಎಂದು ಡಿಸಿ ಎಂ.ಎಸ್. ದಿವಾಕರ್ ತಿಳಿಸಿದ್ದಾರೆ.



ಜಿಲ್ಲಾ ಉಸ್ತುವಾರಿ ಸಚಿವರು ಹಾಗೂ ಮುಖ್ಯಮಂತ್ರಿಗಳಿಂದ ಸಮ್ಮತಿ ಪಡೆದು 2025 ರ ಸಂಜೆ ಫೆ.28 ಮತ್ತು ಮಾರ್ಚ್ 1, 2 ರಂದು ಹಂಪಿ ಉತ್ಸವ ಕಾರ್ಯಕ್ರಮವನ್ನು ಆಚರಣೆ ಮಾಡಲು ಪೂರ್ವಸಿದ್ದತೆಗಳನ್ನು ಕೈಗೊಳ್ಳಲು ಸೂಚಿಸಿರುವ ಹಿನ್ನಲೆಯಲ್ಲಿ ಈ ಬಾರಿ ಉತ್ಸವದ ನೂತನ ಲೋಗೋ ರಚಿಸಲು ಕಲಾವಿದರಿಗೆ ಅವಕಾಶ ನೀಡಲಾಗಿದೆ. ಆಸಕ್ತ ಕಲಾವಿದರು ಸಹಾಯಕ ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ವಿಜಯನಗರ ಜಿಲ್ಲಾ ಕಚೇರಿಗೆ ಜನವರಿ 15 ರೊಳಗೆ ಪ್ರಸ್ತಾವನೆಗಳನ್ನು ಸಲ್ಲಿಸಬೇಕೆಂದು ಹಾಗೂ ಅವಧಿ ಮೀರಿ ಬಂದು ಪ್ರಸ್ತಾವನೆಗಳನ್ನು ಪರಿಗಣಿಸುವುದಿಲ್ಲ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



## ಸಾಂಸ್ಕೃತಿಕ ಮೆರಗು ಹೆಚ್ಚಿಸುವ ಕಲಾವಿದರಿಂದ ಅರ್ಜಿ ಆಹ್ವಾನ

**ಹೊಸಪೇಟೆ:** ವಿಶ್ವವಿಖ್ಯಾತ 2025ರ ಹಂಪಿ ಉತ್ಸವದಲ್ಲಿ ಸಾಂಸ್ಕೃತಿಕ ಮತ್ತು ಮೆರವಣಿಗೆ ಕಾರ್ಯಕ್ರಮ ಗಳನ್ನು ನೀಡಲು ಆಸಕ್ತ ಕಲಾವಿದರಿಂದ ಅರ್ಜಿ ಅಹ್ವಾನಿಸಲಾಗಿದೆ ಎಂದು ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ್ ತಿಳಿಸಿದ್ದಾರೆ.

ನಿಗದಿತ ಹಂಪಿ ಉತ್ಸವಕ್ಕೆ ಮೆರಗು ಹೆಚ್ಚಿಸಲು ಸಾಂಸ್ಕೃತಿಕ, ಮೆರವಣಿಗೆ ಕಾರ್ಯಕ್ರಮಗಳಲ್ಲಿ ಭಾಗವಹಿಸಲಿಚ್ಛಿಸುವ ಆಸಕ್ತ ಕಲಾವಿದರಿಗೆ ಜ.30ರೊಳಗೆ ಅರ್ಜಿ ಸಲ್ಲಿಸಲು ಅವಕಾಶ ನೀಡಲಾಗಿದೆ. ಆಸಕ್ತ ಕಲಾವಿದರು ಸಹಾಯಕ ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ವಿಜಯನಗರ ಜಿಲ್ಲಾ ಕಚೇರಿಯಲ್ಲಿ ಅರ್ಜಿ ಸಲ್ಲಿಸಬೇಕು. ಹಾಗೂ ಸರ್ಕಾರಿ, ಅರೆ ಸರ್ಕಾರಿ, ಅನುದಾನಿತ ಸಂಘ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಕಲಾವಿದರು ಸಕ್ಷಮ ಪ್ರಾಧಿಕಾರದ ಅನುಮತಿ ಪಡೆದು ಕಡ್ಡಾಯವಾಗಿ ಅನುಮತಿ ಪತ್ರದೊಂದಿಗೆ ಅರ್ಜಿ ಸಲ್ಲಿಸಿದಲ್ಲಿ ಮಾತ್ರ ಅಂತಹ ಅರ್ಜಿಗಳನ್ನು ಪರಿಗಣಿಸಲಾಗುವುದು ಎಂದು ತಿಳಿಸಿದ್ದಾರೆ.



**ಆನಂದ ಬಾಣ**





ಹಂಪಿ ಟೈಮ್ಸ್ ವಿಜಯನಗರದ ಹೆಮ್ಮೆ ಕನ್ನಡ ದಿನ ಪತ್ರಿಕೆ

ವಿಜಯನಗರ ಜಿಲ್ಲೆಯ ಸಮಗ್ರ ಸುದ್ದಿ, ವಿಜ್ಞಾನ, ವಿಶೇಷ ಲೇಖನಗಳನ್ನು ಓದಲಿಚ್ಛಿಸುವವರು ಈ ಕೆಳಗಿನ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ, ವಾಟ್ಸಪ್ ಗ್ರೂಪಿಗೆ ಜಾಯಿನ್ ಆಗಿ ಹಂಪಿ ಟೈಮ್ಸ್ ಇ-ಪತ್ರಿಕೆ ಓದಿರಿ.

Only Admins can Send Messages to this Group

Join with Us


# 69 ಮೈಲು ದೂರದ ರೈತರಿಗೂ ನೀರು ದೊರೆಯಲಿ

## ಸಚಿವ ಎನ್.ಎಸ್.ಭೋಸರಾಜು ಸೂಚನೆ | ತುಂಗಭದ್ರಾ ಅಣೆಕಟ್ಟು ಅಧಿಕಾರಿಗಳೊಂದಿಗೆ ಸಭೆ



■ **ಹಂಪಿ ಟೈಮ್ಸ್ ಹೊಸಪೇಟೆ**

ನೀರಾವರಿ ಸಲಹಾ ಸಮಿತಿಯ ನಿರ್ಣಯದಂತೆ ತುಂಗಭದ್ರಾ ಎಡದಂಡೆಯ ಕಾಲುವೆಯಲ್ಲಿ ಹರಿಸಲಾಗುತ್ತಿರುವ 3800 ಕ್ಯೂಸೆಕ್ಸ್ ನೀರು ಕೊನೆಯ ಭಾಗದ ರೈತರಿಗೂ ಸಮರ್ಪಕವಾಗಿ ನೀರು ಸರಬರಾಜು ಆಗುವಂತೆ ಕ್ರಮ ಕೈಗೊಳ್ಳಬೇಕು ಎಂದು ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರಾದ ಎನ್.ಎಸ್.ಭೋಸರಾಜು ಸೂಚನೆ ನೀಡಿದರು.

ಹೊಸಪೇಟೆಯ ಟಿ.ಬಿ.ಡ್ಯಾಂನ ಪ್ರವಾಸಿ ಮಂದಿರದಲ್ಲಿ ತುಂಗಭದ್ರಾ ಅಣೆಕಟ್ಟಿನ ಹಿರಿಯ ಅಧಿಕಾರಿಗಳೊಂದಿಗೆ ಏರ್ಪಡಿಸಿದ್ದ ಸಭೆಯಲ್ಲಿ ಅವರು ಶುಕ್ರವಾರ ಮಾತನಾಡಿದರು, ಜ.1 ರಿಂದ ಎಡದಂಡೆ ಕಾಲುವೆಯಲ್ಲಿ 3800 ಕ್ಯೂಸೆಕ್ಸ್ ನೀರು ಹರಿಸುವಂತೆ ನೀರಾವರಿ ಸಲಹಾ ಸಮಿತಿಯಲ್ಲಿ ನಿರ್ಧರಿಸಲಾಗಿತ್ತು. ಅದರಂತೆ ಕಾಲುವೆಯಲ್ಲಿ ನೀರನ್ನು ಹರಿಯಬಿಡಲಾಗಿದ್ದು, ಎಲ್ಲಾ ಭಾಗದ ರೈತರಿಗೆ ನೀರು ಸಮರ್ಪಕವಾಗಿ ಲಭ್ಯವಾಗುತ್ತಿಲ್ಲ. ಇದರಿಂದ ಬೆಳೆ ಹಾನಿಯಾಗುವ ಆತಂಕದಿಂದ ರೈತರು ಪ್ರತಿಭಟನೆಗೆ ಮುಂದಾಗಿದ್ದಾರೆ. ಈ ಹಿನ್ನಲೆಯಲ್ಲಿ ಎಲ್ಲಾ ಭಾಗಕ್ಕೂ ಸಮರ್ಪಕವಾಗಿ ನೀರು ದೊರೆಯಲು ಗೇಜ್ ಕಾಲುವೆ ಗೇಜ್ ನಿರ್ವಹಣೆ ಮಾಡುವುದು ಬಹಳ ಅವಶ್ಯಕವಾಗಿದೆ. ಈ ನಿಟ್ಟಿನಲ್ಲಿ ಅಧಿಕಾರಿಗಳು ಕ್ರಮ ಕೈಗೊಳ್ಳಬೇಕು ಎಂದು ಸಚಿವರು ಸೂಚನೆ ನೀಡಿದರು.

ದೂರವಾಣಿ ಮೂಲಕ ಜಲಸಂಪನ್ಮೂಲ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿಗಳಾದ ಗೌರವ್ ಗುಪ್ತಾರೊಂದಿಗೆ ಮಾತನಾಡಿದ ಸಚಿವರು, ಸಮರ್ಪಕ ನೀರು ನಿರ್ವಹಣೆಯ ನಿಟ್ಟಿನಲ್ಲಿ ಕಲಬುರ್ಗಿ ಪ್ರಾದೇಶಿಕ ಆಯುಕ್ತರಿಗೆ ಸೂಚನೆ ನೀಡುವಂತೆ ಸೂಚಿಸಿದರು. ಪ್ರಾದೇಶಿಕ ಆಯುಕ್ತರು ಹಾಗೂ ಜಿಲ್ಲಾಧಿಕಾರಿಗಳು ಜಿಲ್ಲೆಗಳ ಮಧ್ಯೆ ಸಮನ್ವಯತೆ ಸಾಧಿಸಬೇಕು. ನೀರು ಎಲ್ಲಾ ಭಾಗದ ರೈತರಿಗೂ ಸಮರ್ಪಕವಾಗಿ ಲಭ್ಯವಾಗುವಂತೆ ಕ್ರಮವಹಿಸಬೇಕು ಎಂದು ಸೂಚನೆ ನೀಡಿದರು. ಮುಂದಿನ 10 ದಿನಗಳು ಬಹಳ ಪ್ರಮುಖವಾಗಿದ್ದು, 69 ಮೈಲು ಕಾಲುವೆಯ ಕೊನೆಯ ಭಾಗದ (ಟೈಲ್ ಎಂಡ್) ರೈತರಿಗೂ ಸಮರ್ಪಕ ನೀರು ದೊರೆಯುವುದನ್ನು ಖಾತ್ರಿ ಪಡಿಸಿಕೊಳ್ಳುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಈ ವೇಳೆ ಸಭೆಯಲ್ಲಿ ಕೊಪ್ಪಳ ಸಂಸದರಾದ ರಾಜಶೇಖರ್ ಬಸವರಾಜ ಹಿಟ್ನಾಳ್, ತುಂಗಭದ್ರಾ ಅಣೆಕಟ್ಟಿನ ಮುಖ್ಯ ಅಭಿಯಂತರರು ಸೇರಿದಂತೆ ವಿವಿಧ ಅಧಿಕಾರಿಗಳು ಭಾಗವಹಿಸಿದ್ದರು.

# ಕೊಟ್ಟೂರು ತಾಲೂಕಿನ 10 ಗ್ರಾಮಗಳಿಗೆ ಕೃಷಿ ಕಣ ನಿರ್ಮಾಣ

■ **ಹಂಪಿ ಟೈಮ್ಸ್ ಕೊಟ್ಟೂರು**

2025–26ನೇ ಸಾಲಿಗೆ ತಾಲೂಕಿನ 10 ವಿವಿಧ ಗ್ರಾಮಗಳಿಗೆ ರೈತರು ಕೃಷಿ ಚಟುವಟಿಕೆಯ ಪಸಲು ಒಕ್ಕಣಿ ಮಾಡಿಕೊಳ್ಳಲು ಕೃಷಿ ಕಣ ನಿರ್ಮಾಣಕ್ಕೆ 30 ಲಕ್ಷ ರೂ. ಕ್ರಿಯಾಯೋಜನೆ ಕೊಟ್ಟೂರು ಕೃಷಿ ಉತ್ಪನ್ನ ಮಾರು ಕಟ್ಟೆಯ ಆಡಳಿತ ಮಂಡಳಿ ಸಿದ್ದಪಡಿಸಿದೆ.

ಕೊಟ್ಟೂರು ಎಪಿಎಂಸಿ ಮಾರುಕಟ್ಟೆ ಕಚೇರಿ ಸಭಾಂಗಣದಲ್ಲಿ ಶುಕ್ರವಾರ ಅಧ್ಯಕ್ಷ ಎನ್. ನಂಜಪ್ಪ ಅವರ ನೇತೃತ್ವದಲ್ಲಿ ನಡೆದ 2025–26ನೇ ಸಾಲಿನ ಸಾಮನ್ಯ ನಿಧಿ, ಮುಂಗಡ ಪತ್ರದ ಅನುಮೋದನಾ ಸಭೆಯಲ್ಲಿ 10 ಗ್ರಾಮಗಳಲ್ಲಿ ಕೃಷಿ ಕಣ ನಿರ್ಮಾಣ ಕ್ರಿಯಾ ಯೋಜನೆಗೆ ಸಭೆ ಸಮ್ಮತಿಸಿತು.

ಕಾರ್ಯದರ್ಶಿ ವೀರಣ್ಣ ಅವರು ಸಭೆಯಲ್ಲಿ ಮಾತನಾಡಿ, ಮಾರುಕಟ್ಟೆಗೆ ಲೈಸನ್ಸ್ ಶುಲ್ಕ, ಮಾರುಕಟ್ಟೆ ಶುಲ್ಕ ಹಾಗೂ ಇತರೆ ಆದಾಯ ಮೂಲಗಳಿಂದ ಒಟ್ಟು 2.45 ಕೋಟಿ ರೂ. ಅಂದಾಜು ಅದಾಯ, ರಾಜ್ಯ ಕೃಷಿ ಮಾರಾಟ ಮಂಡಳಿಗೆ ವಂತಿಕೆ ಹಾಗೂ ಆವರ್ತ ನಿಧಿಗೆ ವಂತಿಕೆ ಸೇರಿದಂತೆ ಇತರೇ ವೆಚ್ಚಗಳಿಗೆ ಒಟ್ಟು 1.44 ಕೋಟಿ ರೂ. ವೆಚ್ಚದ ವರದಿ ಸಲ್ಲಿಸಿದರು. 2024 ಮಾರ್ಚ 31 ರ ಅಂತ್ಯಕ್ಕೆ ಇದ್ದಂತಹ ಖಾಯ ನಿಧಿ ಮುಂಗಡ ಹಾಗೂ 2024–25ನೇ ಸಾಲಿನ ಸಂಭವನೀಯ ಉಳಿತಾಯ, 2025–26ನೇ ಸಾಲಿಗೆ ಸಂಭವನೀಯ ಉಳಿತಾಯ ಒಟ್ಟು 3.97 ಕೋಟಿ ರೂ. ಅಂದಾಜು ಉಳಿತಾಯದ ಬಗ್ಗೆ ವರದಿ ನೀಡಿ, ಸದರಿ ಕಾಮಗಾರಿ ಮತ್ತು ಕ್ರಿಯಾ ಯೋಜನೆ ಕಾಮಗಾರಿ ವೆಚ್ಚ ತಗೆದು, ಮಾರುಕಟ್ಟೆಯಲ್ಲಿ ಅಂದಾಜು 27 ಲಕ್ಷ ರೂ. ವರ್ಷದಲ್ಲಿ ಉಳಿತಾಯ ಆಗಲಿರುವ ಬಗ್ಗೆ ವರದಿ ಸಲ್ಲಿಸಿದರು.

ಈ ವೇಳೆ ಮಾತನಾಡಿದ ಅದ್ಯಕ್ಷ ಎ.ನಂಜಪ್ಪ ಮಾತನಾಡಿ, ತಾಲೂಕಿನಲ್ಲಿ 10 ಕೃಷಿ ಕಣ ನಿರ್ಮಾಣ ಕ್ರಿಯಾ ಯೋಜನೆ ಬಗ್ಗೆ ತಿಳಿಸಿ ರೈತರ ಅನುಕೂಲಕ್ಕಾಗಿ ಸರ್ಕಾರದಿಂದ ಹೆಚ್ಚಿನ ಅನುದಾನ ತರುವ ಮೂಲಕ ಮಾರುಕಟ್ಟೆಯನ್ನು ಸರ್ವ ರೀತಿಯಿಂದಲೂ ಅಭಿವೃದ್ಧಿಪಡಿಸುವ ಭರವಸೆ ನೀಡಿದರು. ಈ ವೇಳೆ ಎಪಿಎಂಸಿ ಉಪಾದ್ಯಕ್ಷರು ಎಂ.ಶಿವಣ್ಣ,ನಿರ್ದೇಶಕರಾದ ಕೆ.ಶಿವಕುಮಾರಗೌಡ,ಹೆಚ್.ಕೆ ಕಲ್ಲಪ್ಪ,ಚಿರಿಬಿ ಕೊಟ್ರೇಶ್,ಬೇವೂರ ದೇವಪ್ಪ, ಇತರರಿದ್ದರು.

# ಹಂಪಿ ಅಭಿವೃದ್ಧಿಗೆ ಅಧಿಕಾರಿಗಳು ಕೈಜೋಡಿಸಿ

## ಶಾಸಕ ಎಚ್.ಆರ್.ಗವಿಯಪ್ಪ ಹಂಪಿ ಅಭಿವೃದ್ಧಿಗೆ ವಿವಿಧ ಇಲಾಖೆ ಅಧಿಕಾರಿಗಳೊಂದಿಗೆ ಚರ್ಚೆ

## ವಿಶ್ವಕ್ಕೆ ಮಾದರಿಯಾಗುವಂತೆ ಮೂಲಭೂತ ಸೌಲಭ್ಯ | ಶೀಘ್ರ ಪಸ್ತಾವನೆ ಸಲ್ಲಿಸಲು ಸೂಚನೆ

■ **ಹಂಪಿ ಟೈಮ್ಸ್ ಹೊಸಪೇಟೆ**

ವಿಶ್ವ ಪರಂಪರೆ ತಾಣ ಹಂಪಿಯಲ್ಲಿ ಪ್ರವಾಸಿಗರಿಗೆ ಮತ್ತು ಭಕ್ತರಿಗೆ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸಬೇಕಿದ್ದು, ವಿಶ್ವಕ್ಕೆ ಮಾದರಿ ರೀತಿಯಲ್ಲಿ ಹಂಪಿ ಅಭಿವೃದ್ಧಿ ಎಲ್ಲಾ ಇಲಾಖೆಗಳ ಜವಾಬ್ದಾರಿಯಾಗಿದೆ. ಸಂಬಂಧಿಸಿದ ವಿವಿಧ ಇಲಾಖೆಯ ಅಧಿಕಾರಿಗಳು ಅಭಿವೃದ್ಧಿಗೆ ದೃಷ್ಟಿಯಿಂದ ನಿಯಮಗಳನ್ನು ಸಾಧ್ಯವಾದಷ್ಟು ಸರಳೀಕರಣಗೊಳಿಸಿಕೊಂಡು ಅಭಿವೃದ್ಧಿಗೆ ರೂಪರೇಶಗಳನ್ನು ಸಿದ್ದಪಡಿಸಿ, ಶೀಘ್ರ ಪ್ರಸ್ತಾವನೆ ಸಲ್ಲಿಸಬೇಕು. ಸಿಎಂ ಸಿದ್ದರಾಮಯ್ಯನವರ ಗಮನಕ್ಕೆ ತಂದು ಅನಮತಿ ಪಡೆದು ಅಭಿವೃದ್ಧಿಗೆ ಶ್ರಮಿಸಲಾಗುವುದು ಎಂದು ಶಾಸಕ ಎಚ್.ಆರ್. ಗವಿಯಪ್ಪ ಹೇಳಿದರು.

ಬೆಂಗಳೂರಿನ ಶಾಸಕರ ಕಾರ್ಯಾಲಯದಲ್ಲಿ ಶುಕ್ರವಾರ ರಾಜ್ಯ ಮತ್ತು ಭಾರತೀಯ ಪುರಾತತ್ವ ಇಲಾಖೆ, ಮುಜರಾಯಿ ಇಲಾಖೆ, ಪ್ರವಾಸೋದ್ಯಮ ಇಲಾಖೆ, ಹಂಪಿ ಅಭಿವೃದ್ಧಿ ಪ್ರಾಧಿಕಾರ, ಗ್ರಾಮ ಪಂಚಾಯತ್, ಕಂದಾಯ ಇಲಾಖೆ, ಅರಣ್ಯ ಮತ್ತು ಪರಿಸರ, ಪೊಲೀಸ್ ಇಲಾಖೆ ಸೇರಿದಂತೆ ಸಂಬಂಧಿಸಿದ ಎಲ್ಲಾ ಇಲಾಖೆಗಳ ಅಧಿಕಾರಿಗಳೊಂದಿಗೆ ಸಭೆ ನಡೆಸಿ, ಅಧಿಕಾರಿಗಳಿಂದ ಮಾಹಿತಿ ಪಡೆದು ಮಾತನಾಡಿದರು. ಹಂಪಿಗೆ ಪ್ರವಾಸಿಗರು ಮತ್ತು ಭಕ್ತರ ಸಂಖ್ಯೆ ವರ್ಷದಿಂದ ವರ್ಷಕ್ಕೆ ಹೆಚ್ಚಾಗಿದೆ. ಭಕ್ತರು ಹಾಗೂ ಪ್ರವಾಸಿಗರಿಗೆ ಮೂಲಭೂತ ಸೌಲಭ್ಯಗಳನ್ನು ಒದಗಿಸಿದರೆ ಸಾಕಷ್ಟು ಉದ್ಯೋಗವಕಾಶಗಳು ದೊರೆಯುವದರ ಜೊತೆ ಈ ಭಾಗದ ಜನರ ಆರ್ಥಿಕ ಪ್ರಗತಿಗೂ ಸಹಕಾರಿಯಾಗಲಿದೆ. ಹಂಪಿ ಕ್ಷೇತ್ರ ಕೇವಲ ಪ್ರವಾಸಿ ತಾಣವಾಗದೇ, ಐತಿಹಾಸಿಕ ಧಾರ್ಮಿಕ ಕ್ಷೇತ್ರವಾಗಿದೆ. ಧಾರ್ಮಿಕ ಕ್ಷೇತ್ರ ಅಭಿವೃದ್ಧಿಗೆ ಎಲ್ಲಾ ಅಧಿಕಾರಿಗಳು ಪರಸ್ಪರ ಸಂವಹನ ನಡೆಸಿ, ಅಭಿವೃದ್ಧಿಗೆ ಸೂಕ್ತ ಸಲಹೆಗಳೊಂದಿಗೆ ಪ್ರಸ್ತಾವನೆ ಸಲ್ಲಿಸಬೇಕು ಎಂದರು ಸೂಚಿಸಿದರು.





ಹಂಪಿ ಅಭಿವೃದ್ಧಿ ಯಾವುದೇ ಒಂದು ಇಲಾಖೆ ನಿರ್ಧರಿಸಿದರೆ ಸಾಲದು. ಹಂಪಿ ಅಭಿವೃದ್ಧಿಗೆ ಅನೇಕ ಇಲಾಖೆಗಳು ಕೈಜೋಡಿಸಬೇಕು. ರೂಪರೇಶ ಮತ್ತು ಅಗತ್ಯ ಅನುದಾನ ಕುರಿತು ವಿವರವಾಗಿ ವರದಿ ಸಲ್ಲಿಸಬೇಕು ಎಂದು ಅಧಿಕಾರಿಗಳಿಗೆ ತಿಳಿಸಿದರು. ವಿವಿಧ ಇಲಾಖೆಯ ಅಧಿಕಾರಿಗಳು ತಮ್ಮ ಇಲಾಖೆಯ ನಿಯಮಗಳನ್ನು ಶಾಸಕರೊಂದಿಗೆ ಹಂಚಿಕೊಂಡು, ಹಂಪಿ ಅಭಿವೃದ್ಧಿಗೆ ಶ್ರಮಿಸುತ್ತೇವೆ ಎಂದು ತಿಳಿಸಿದರು.

ಸಹಾಯಕ ಆಯುಕ್ತ, ತಹಶೀಲ್ದಾರ್, ತಾಪಂ ಇಒ, ನಗರಸಭೆ ಪೌರಾಯುಕ್ತರು, ಪ್ರವಾಸೋಧ್ಯಮ ಇಲಾಖೆ ಅಧಿಕಾರಿಗಳು ಸೇರಿದಂತೆ ಇತರರು ಇದ್ದರು.

# ಮಲ್ಲಮ್ಮಗೆ ವಾತ್ಸಲ್ಯ ಮನೆ ಹಸ್ತಾಂತರ



■ **ಹಂಪಿ ಟೈಮ್ಸ್ ಹೊಸಪೇಟೆ**

ತಾಲೂಕಿನ ನಾಗಲಾಪುರ ಗ್ರಾಮದಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ವತಿಯಿಂದ ಮಾಶಾಸನ ಫಲಾನುಭವಿಯಾದ ಮಲ್ಲಮ್ಮ ಅವರಿಗೆ ಧರ್ಮಸ್ಥಳ ಸಂಸ್ಥೆಯ ವಾತ್ಸಲ್ಯ ಕಾರ್ಯಕ್ರಮದ ಅಡಿಯಲ್ಲಿ ಪರಮಪೂಜ್ಯ ಡಾ. ಡಿ ವೀರೇಂದ್ರ ಹೆಗಡೆಯವರು ಹಾಗೂ ಮಾತೋಶ್ರೀ ಹೇಮಾವತಿ ಅಮ್ಮನವರ ಆಶೀರ್ವಾದದಿಂದ ನಿರ್ಮಿಸಿದಂತಹ ವಾಸ್ತಲ್ಯ ಮನೆಯನ್ನು ಸಂಸ್ಥೆಯ ಕಲ್ಯಾಣ ಕರ್ನಾಟಕ ಪ್ರಾದೇಶಿಕ ನಿರ್ದೇಶಕರಾದ ಜೆ ಚಂದ್ರಶೇಖರ್, ಹಾಗೂ ಸಂಸ್ಥೆಯ ಜಿಲ್ಲಾ ನಿರ್ದೇಶಕರಾದ ಸತೀಶ್ ಶೆಟ್ಟಿ ಅವರು ಗ್ರಾಮದ ಮುಖಂಡರ ಸಮ್ಮುಖದಲ್ಲಿ ಪಲಾನುಭವಿಗೆ ಮನೆಯನ್ನು ಹಸ್ತಾಂತರ ಮಾಡಿದರು.

ಈ ಸಂದರ್ಭದಲ್ಲಿ ತಾಲ್ಲೂಕಿನ ಯೋಜನಾಧಿಕಾರಿ ಮಾರುತಿ ಎಸ್, ನಾಗಲಾಪುರ ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿ ಜಿಲ್ಲಾನ್ ಸರ್,ಗ್ರಾಮ ಪಂಚಾಯಿತಿನ ಸದಸ್ಯರುಗಳಾದ ಸೋಮಣ್ಣ, ಹನುಮಂತಪ್ಪ, ಶಂಕ್ರಯ್ಯ, ಯರ್‍ರಿಸ್ವಾಮಿ, ಅಂಜಿನಪ್ಪ, ಹನುಮಂತಮ್ಮ, ಗ್ರಾಮದ ಮುಖಂಡರಾದ ತೀರಕಪ್ಪ ಡಾಟಟ. ಗೋಪಾಲ ರೆಡ್ಡಿ, ವಲಯದ ಮೇಲ್ವಿಚಾರಕರಾದ ನಂದನ್, ಜ್ಞಾನವಿಕಾಸ ಸಮನ್ವಯ ಅಧಿಕಾರಿ ರೇಖಾ, ಸೇವಾಪ್ರತಿನಿಧಿ ಕಲಾವತಿ, ಯಶೋಧ ಒಕ್ಕೂಟದ ಪದಾಧಿಕಾರಿಗಳು ಉಪಸ್ಥಿತರಿದ್ದರು

## ಸ್ಟುಡೆಂಟ್ ಕಾಲಂ

# ಪ್ರಭುವಿನ ಕನಸು



ಸಿದ್ದಾಪುರದಲ್ಲಿ ಪ್ರಭು ಎಂಬ ವಿದ್ಯಾರ್ಥಿ ಇದ್ದನು. ಅವನಿಗೆ ಒಂದು ದೊಡ್ಡ ಕನಸಿತ್ತು. ಆ ಕನಸನ್ನು ಈಡೇರಿಸಿಕೊಳ್ಳಲು ಸದಾ ಶ್ರಮಿಸುತ್ತಿದ್ದ. ಅವನು ಒಬ್ಬ ಡಾಕ್ಟರ್ ಆಗಬೇಕೆಂದು ಬಯಸಿದ್ದನು. ತನ್ನ ಗ್ರಾಮದಲ್ಲಿರುವ ಬಡವರಿಗೆ ಉಚಿತವಾಗಿ ಚಿಕಿತ್ಸೆ ನೀಡಬೇಕೆಂಬ ಆಸೆ ಅವನ ಮನದಲ್ಲಿತ್ತು.

ತನ್ನ ಆಸೆಯನ್ನು ಈಡೇರಿಸಿಕೊಳ್ಳಲು ಪ್ರತಿದಿನ ಬೆಳಿಗ್ಗೆ ಬೇಗ ಎದ್ದು ಓದುತ್ತಿದ್ದನು. ಕೇವಲ ಪಠ್ಯಪುಸ್ತಕಗಳನ್ನಲ್ಲದೇ ಗ್ರಂಥಾಲಯದಿಂದ ತಂದ ಇನ್ನಿತರೇ ಪುಸ್ತಕಗಳನ್ನೂ ಓದುತ್ತಿದ್ದ. ಚೆನ್ನಾಗಿ ಓದುತ್ತಿದ್ದರಿಂದ ತರಗತಿಯಲ್ಲಿ ಯಾವಾಗಲೂ ಮೊದಲ ಸ್ಥಾನವನ್ನು ಪಡೆಯುತ್ತಿದ್ದನು. ಆದರೆ ಅವನು ಬಡತನ ಕುಟುಂಬಕ್ಕೆ ಸೇರಿದ್ದರಿಂದ ಉನ್ನತ ವ್ಯಾಸಂಗ ಮಾಡಲು ಹಣವಿರಲಿಲ್ಲ.



ಒಂದು ದಿನ ಅವನ ಶಾಲೆಯ ಶಿಕ್ಷಕರು ಅವರ ಪ್ರತಿಭೆಯನ್ನು ಗಮನಿಸಿ ಒಂದು ವಿದ್ಯಾರ್ಥಿ ವೇತನದ ಬಗ್ಗೆ ಹೇಳಿದರು. ಅದಕ್ಕೆ ಅರ್ಜಿ ಸಲ್ಲಿಸಿದ. ಅದಕ್ಕಾಗಿ ಇದ್ದ ಪರೀಕ್ಷೆಯನ್ನು ಪಾಸಾಗಿ ವಿದ್ಯಾರ್ಥಿ ವೇತನವನ್ನು ಪಡೆದುಕೊಂಡನು. ಒಂದು ದೊಡ್ಡ ನಗರದಲ್ಲಿರುವ ವೈದ್ಯಕೀಯ ಕಾಲೇಜಿಗೆ ಸೇರಿಕೊಂಡನು. ಅಲ್ಲಿ ಅವನು ತುಂಬಾ ಕಷ್ಟಪಟ್ಟು ಅಧ್ಯಯನ ಮಾಡಿದನು. ತಡರಾತ್ರಿವರೆಗೂ ಓದುತ್ತಿದ್ದನು. ಪ್ರಯೋಗಾಲಯದಲ್ಲಿ ಹಗಲು ರಾತ್ರಿ ಕೆಲಸ ಮಾಡುತ್ತಿದ್ದನು. ಅಂತಿಮವಾಗಿ ಅವನು ಒಬ್ಬ ದೊಡ್ಡ ಡಾಕ್ಟರ್ ಆದನು.

ತನ್ನ ಗ್ರಾಮಕ್ಕೆ ಹೋಗಿ, ಬಡವರಿಗೆ ಉಚಿತವಾಗಿ ಚಿಕಿತ್ಸೆ ನೀಡಲು ಆರಂಭಿಸಿದನು. ಅವನ ಕನಸು ನನಸಾಯಿತು. ಹೀಗೆ ಕುಂಟನೂ ನಡೆಯಬಲ್ಲ, ಕಿವುಡನೂ ಕೇಳಬಲ್ಲ. ಮೂಕನು ಮಾತನಾಡಬಲ್ಲ, ಕುರುಡನು ನೋಡಬಲ್ಲ. ನಮ್ಮಲ್ಲಿ ಧೈರ್ಯ, ಸಾಧಿಸುವ ಛಲವಿದ್ದರೆ, ನಾವು ಏನನ್ನಾದರೂ ಸಾಧಿಸಬಹುದು ಎಂಬುದಕ್ಕೆ ಈ ಕಥೆಯು ಒಂದು ಉದಾಹರಣೆಯಾಗಿದೆ. ಅಲ್ಲವೇ?

**– ಇ. ಸುಭಾಷ್, 9ನೇ ತರಗತಿ**
**ಸರಕಾರಿ ಪ್ರೌಢಶಾಲೆ, ಬಸರಕೊಡು ಹ.ಬೊ.ಹಳ್ಳಿ(ತಾ)**

**ಮೈಮೇಲೆ ಹರಿದ ಬಟ್ಟೆ ಇದ್ದರೂ ಚಿಂತೆಯಿಲ್ಲ.**
**ಕೈಯಲ್ಲೊಂದು ಕನ್ನಡ ದಿನ ಪತ್ರಿಕೆ ಇರಲಿ.**
ಡಿ..ವಿ.ಜಿ.

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

### ಬೆಳಕಿನ ಹಾದಿ

ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

**–: ಸಂಪಾದಕರು :–**
**ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.**
ಇ–ಮೇಲ್:hampitimes@gmail.com
M: 94486 33038

## ಓದುಗರ ಗಮನಕ್ಕೆ

**ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.**
**– ಜಾಹೀರಾತು ವ್ಯವಸ್ಥಾಪಕರು.**

# ಭೂಮಿಯ ಗುರುತ್ವಾಕರ್ಷಣೆ ದ್ವಿಗುಣವಾದರೆ...

ಭೂಮಿ ಸೂರ್ಯನ ಸುತ್ತ ಸುತ್ತುವ ಒಂದು ಆಕಾಶ ಕಾಯ. ಇದರ ಚಲನೆಯ ನಿಯಂತ್ರಕ ಸೂರ್ಯ. ಸೂರ್ಯನಿಗಿರುವಂತೆ ಭೂಮಿಗೂ ಸಹ ತನ್ನದೇ ಆದ ಗುರುತ್ವಕರ್ಷಣೆ ಇದೆ. ಮರದ ಕೆಳಗೆ ಮಲಗಿದ ನ್ಯೂಟನ್ ತನ್ನ ತಲೆ ಮೇಲೆ ಸೇಬುಬಿದ್ದಾಗ, ಇದು ಗುರುತ್ವಕರ್ಷಣೆಯ ಪರಿಣಾಮ ಎಂದು ಜಗಕ್ಕೆ ಸಾರಿದ. ಇದರಿಂದ ಭೂಮಿಗೂ ಗುರುತ್ವ ಇದೆ ಎಂಬುದು ಸಾಬೀತಾಯಿತು. ಆದರೆ ಸೂರ್ಯನ ಗುರುತ್ವಾಕರ್ಷಣ ಶಕ್ತಿಗೆ ಹೋಲಿಸಿದರೆ ಭೂಮಿಯ ಗುರುತ್ವಾಕರ್ಷಣ ಶಕ್ತಿ ಕಡಿಮೆ.

ಗುರುತ್ವ ಎಂದರೆ,,, : ಗುರುತ್ವ ಎಂಬುದು ನಿಗೂಢ ಶಕ್ತಿಯಾಗಿದ್ದು, ಇತರೆ ವಸ್ತುಗಳನ್ನು ತನ್ನೆಡೆಗೆ ಆಕರ್ಷಿಸುತ್ತದೆ. ಅದು ಪ್ರತಿಯೊಂದು ವಸ್ತುವಿನಲ್ಲೂ ಇರುತ್ತದೆ. ಒಂದು ವಸ್ತು/ಕಾಯ ಎಷ್ಟು ದೊಡ್ಡದಿದೆ ಮತ್ತು ಅದು ಎಷ್ಟು ಸಮೀಪದಲ್ಲಿದೆ ಎಂಬುದರ ಆಧಾರದ ಮೇಲೆ ಗುರುತ್ವ ನಿರ್ಧರಿತವಾಗುತ್ತದೆ.

ಗುರುತ್ವ ಏಕೆ ಮುಖ್ಯ?: ಗುರುತ್ವಾಕರ್ಷಣೆ ಬಹಳ ಮುಖ್ಯ. ಅದು ಇಲ್ಲದೇ ಹೋದರೆ ನಾವು ಬದುಕಲು ಅಸಾಧ್ಯ. ಸೂರ್ಯನ ಗುರುತ್ವಾಕರ್ಷಣೆಯಿಂದ ಭೂಮಿ ತನ್ನ ಕಕ್ಷೆಯಲ್ಲಿಯೇ ಸುತ್ತುತ್ತದೆ. ಇದರಿಂದ ನಮ್ಮ ಭೂಮಿ ಸೂರ್ಯನಿಂದ ದೂರವೂ ಅಲ್ಲದ, ಸಮೀಪವೂ ಅಲ್ಲದ ಸ್ಥಾನದಲ್ಲಿದೆ. ಬಿಸಿಲು ಮತ್ತು ತಂಪು, ಬೆಳಕು ಮತ್ತು ಕತ್ತಲು ಎಲ್ಲವೂ ಸಮಸ್ಥಿತಿಯಲ್ಲಿವೆ. ಹಾಗಾಗಿ ಜೀವಿಗಳಿಗೆ ಅನುಕೂಲಕರವಾದ ವಾತಾವರಣ ಇದೆ.

ಭೂಮಿಗೂ ಗುರುತ್ವಾಕರ್ಷಣೆ ಇದೆ. ಅದು ಇರುವುದರಿಂದ ಭೂಮಿಯ ಮೇಲಿನ ಸಾಗರಗಳ ನೀರು ಅಂತರಿಕ್ಷದಲ್ಲಿ ಚೆಲ್ಲದಂತೆ ಹಾಗೆಯೇ ನಿಂತಿದೆ. ನಾವು ನಡೆದಾಡಲು, ಆಣೆಕಟ್ಟು, ಮನೆ, ಬಂಗಲೆ, ಸೇತುವೆ ಮುಂತಾದ ಕಟ್ಟಡಗಳನ್ನು ನಿರ್ಮಿಸಲು ಸಾಧ್ಯವಾಗಿದೆ. ಆದಾಗ್ಯೂ ಭೂಮಿಯ ಗುರುತ್ವ ಎಲ್ಲೆಡೆ ಒಂದೇ ರೀತಿಯಿಲ್ಲ. ಕಡಿಮೆ ದ್ರವ್ಯರಾಶಿ ಸ್ಥಳಗಳಿಗಿಂತ ಹೆಚ್ಚು ಭೂಗರ್ಭವಿರುವ ಸ್ಥಳಗಳಲ್ಲಿ ಗುರುತ್ವ ಹೆಚ್ಚು ಇದೆ. ಭೂಮಿಯ ಗುರುತ್ವದಲ್ಲಿನ ವ್ಯತ್ಯಾಸ ಅಳೆಯಲು 'ನಾಸಾ'ವು ಗ್ರಾವಿಟಿ ರಿಕವರಿ ಮತ್ತು ಗ್ರೇಸ್ ಎಂಬ ಎರಡು ಬಾಹ್ಯಾಕಾಶ ನೌಕೆಗಳನ್ನು ಬಳಸುತ್ತದೆ. ಇಂತಹ ಅತೀ ಮಹತ್ವವುಳ್ಳ ಭೂಮಿಯ ಮೇಲಿನ ಗುರುತ್ವವು ದ್ವಿಗುಣವಾದರೆ ಏನಾಗುತ್ತಿತ್ತು. ಪ್ರಕೃತಿ, ಮೂಲಭೂತ ಸೌಲಭ್ಯಗಳು, ಹೀಗೆಯೇ ಇರುತ್ತವೆಯೇ?.



ಆರ್.ಬಿ.ಗುರುಬಸವರಾಜ
ಶಿಕ್ಷಕರು, ಹ.ಬೊ.ಹಳ್ಳಿ

Scan For Digital Colourful
HAMPI TIMES E-paper

ಸೂರ್ಯನು ಭೂಮಿಗಿಂತ 3,30,000 ಪಟ್ಟು ಹೆಚ್ಚು ಭಾರವಾಗಿದ್ದಾನೆ. ಹಾಗಾಗಿ ಸೂರ್ಯನ ಗುರುತ್ವವು ಸಹಜವಾಗಿ ಭೂಮಿಯನ್ನು ತನ್ನೆಡೆ ಎಳೆಯುತ್ತದೆ. ಅದೇ ವೇಳೆ ಭೂಮಿಗೂ ಸಹ ಗುರುತ್ವ ಇದ್ದು, ತನ್ನ ಅಕ್ಷೆಯಲ್ಲಿ ತಾನು ಸುತ್ತುತ್ತಾ ಅಂಡಾಕಾರದ ಪಥದಲ್ಲಿ ಸೂರ್ಯನನ್ನು ಸುತ್ತುತ್ತದೆ. ಭೂಮಿಯು ತನ್ನ ಕಕ್ಷೆಯಲ್ಲಿ ವೇಗವಾಗಿ ಚಲಿಸುತ್ತಿರುವುದರಿಂದ ಸೂರ್ಯನ ಬೃಹತ್ ಪ್ಲಾಸ್ಮಾದೊಳಗೆ ಸಿಲುಕಿಕೊಳ್ಳುವುದಿಲ್ಲ.

ಒಂದು ವೇಳೆ ಭೂಮಿಯ ಗುರುತ್ವವು ಕೇವಲ ಶೇಕಡಾ 5 ರಷ್ಟು ಹೆಚ್ಚಾದರೆ ಸಾಕು, ಭೂಮಿಯ ಅಂಡಾಕಾರದ ಕಕ್ಷಾ ಪಥವೇ ಬದಲಾಗುತ್ತದೆ. ಆಗ ಮಳೆಗಾಲ, ಚಳಿಗಾಲ ಮತ್ತು ಬೇಸಿಗೆ ಕಾಲದಲ್ಲಿ ವ್ಯತ್ಯಾಸವಾಗುತ್ತದೆ. ಬೇಸಿಗೆಯ ಪ್ರಮಾಣ ಹೆಚ್ಚಾಗುತ್ತದೆ ಮತ್ತು ವ್ಯಾಪಕವಾದ ಕ್ಷಾಮ ಉಂಟಾಗುತ್ತದೆ. ಇದರಿಂದ ವಿಶ್ವದ ಆರ್ಥಿಕ ಸ್ಥಿತಿ ಕುಸಿಯುತ್ತದೆ. ಕ್ಷಾಮದ ಪರಿಣಾಮದಿಂದ ಜೀವಿಗಳ ಉಳಿವು ಕಷ್ಟಸಾಧ್ಯವಾಗುತ್ತದೆ. ಇದು ಕೇವಲ ಶೇಕಡಾ 5 ರಷ್ಟು ಗುರುತ್ವ ಹೆಚ್ಚಾದುದರ ಪರಿಣಾಮ. ಒಂದು ವೇಳೆ ಭೂಮಿಯ ಗುರುತ್ವವು ಡಬಲ್ ಆದರೆ ಏನಾಗುತ್ತೆ? ನೋಡೋಣ.

ಸದ್ಯಕ್ಕೆ ಹವಾಮಾನ ಕಾಳಜಿಯನ್ನು ಪಕ್ಕಕ್ಕೆ ಇಡೋಣ. ವಾಸ್ತವತೆ ಬಗ್ಗೆ ಯೋಚಿಸೋಣ. ಇಂತಹ ತೀವ್ರವಾದ ಬದಲಾವಣೆಗಳು ಸಂಭವಿಸಿದಾಗ ಮೊದಲು ನಾವು ಭೂಮಿ ಮೇಲೆ ಜೀವಂತವಾಗಿ ಬದುಕಲು ಸಾಧ್ಯವಿಲ್ಲ. ಏಕೆಂದರೆ ಭೂಮಿಯ ಗುರುತ್ವ ದ್ವಿಗುಣವಾದರೆ ತಿರುಳು ತನ್ನಷ್ಟಕ್ಕೆ ತಾನೇ ಕುಸಿಯುತ್ತದೆ. ಅದರ ಕಂದಕದಲ್ಲಿ ನಾವೆಲ್ಲರೂ ಮಣ್ಣುಪಾಲಾಗುತ್ತೇವೆ ಅಥವಾ ಭೂಗರ್ಭದ ಶಾಖಕ್ಕೆ ಸುಟ್ಟು ಕರಕಲಾಗುತ್ತೇವೆ. ಭೂಮಿಯ ಈಗಿನ ತೂಕ ಅಂದಾಜು 6ಥ1024 ಕಿ.ಗ್ರಾಂ.ಗಳು. ಅಂದರೆ 6 ರ ಮುಂದೆ 24 ಸೊನ್ನೆಗಳನ್ನು ಬರೆದರೆ ಎಷ್ಟಾಗುತ್ತದೆಯೋ ಅಷ್ಟು ಕಿ.ಗ್ರಾಂಗಳು. ಭೂಮಿಯ ಗುರುತ್ವ ಹೆಚ್ಚಾದರೆ ಭೂಮಿಯೊಳಗಿನ ಶಿಲಾ ಭಾರ ಹೆಚ್ಚಾಗಿ ಒಳಭಾಗದದಲ್ಲಿ ಕುಸಿಯುತ್ತದೆ. ಇದರಿಂದ ಗ್ರಹದ ಮೇಲಿನ ಎಲ್ಲವೂ ಭೂಗರ್ಭ ಸೇರುತ್ತವೆ.




ಒಂದು ವೇಳೆ ಇಂತಹ ಘೋರ ಸನ್ನಿವೇಶದಿಂದಲೂ ಪಾರಾದೆವು ಎಂದುಕೊಳ್ಳೋಣ. ಆಗ ಗುರುತ್ವದ ಪ್ರಭಾವದಿಂದ ನಿಮ್ಮ ಆಕಾರವೇ ಬದಲಾಗಿರುತ್ತದೆ. ಅದು ನೀವೇ ಎಂದು ಯಾರೂ ನಿಮ್ಮನ್ನು ಗುರುತಿಸಲಾರರು. ಗುರುತ್ವ ಹೆಚ್ಚಳದಿಂದ ವಾತಾವರಣದಲ್ಲಿ ಒತ್ತಡ ಹೆಚ್ಚುತ್ತದೆ. ಹೆಚ್ಚಿದ ಒತ್ತಡದಲ್ಲಿ ಹೃದಯ ಮತ್ತು ಶ್ವಾಸಕೋಶಗಳು ಹದಗೆಡುತ್ತವೆ. ಹಾಸಿಗೆ ನೋವನ್ನು ತರುತ್ತದೆ. ಮೆಟ್ಟಲುಗಳನ್ನು ಕಂಡು ಭಯ ಉಂಟಾಗುತ್ತದೆ. ಪ್ರಯಾಣ ಪ್ರಯಾಸವಾಗುತ್ತದೆ. ಏಕೆಂದರೆ ಚಲನೆ ನಿಧಾನವಾಗುತ್ತದೆ.

ಮೂಲಭೂತ ಸೌಕರ್ಯಗಳಾದ ಗಾಳಿ, ನೀರು, ನೆಲ ಇವುಗಳ ಲಭ್ಯತೆಯಲ್ಲಿ ಏರುಪೇರುಗಳಾಗುತ್ತವೆ. ವಿಜ್ಞಾನ ಮತ್ತು ತಂತ್ರಜ್ಞಾನವದಿಂದಲೂ ಕೂಡಾ ಪ್ರಕೃತಿಯನ್ನು ರಕ್ಷಿಸಿಕೊಳ್ಳಲಾ ಗುವುದಿಲ್ಲ. ಎಲ್ಲಾ ರೀತಿಯಾದ ಮಾನವ ನಿರ್ಮಿತ ಕಟ್ಟಡಗಳು ಮತ್ತು ಶಕ್ತಿಗಳು ನಾಶ ಹೊಂದುತ್ತವೆ. ವಿಮಾನಗಳು ಹಾರಾಟದ ಶಕ್ತಿ ಕಳೆದುಕೊಂಡರೆ, ಕೃತಕ ಉಪಗ್ರಹಗಳು ಭೂಮಿಗೆ ವಾಪಾಸಾಗುತ್ತವೆ. ಏಕೆಂದರೆ ಭೂ ಕಕ್ಷೆ ಬದಲಾಗಿರುತ್ತದೆ.

ಮರಗಳ ತೂಕ ಹೆಚ್ಚಾಗಿ ಕುಸಿಯುತ್ತವೆ. ಮರಗಳು ತಮ್ಮ ಬದುಕಿಗೆ ಬೇಕಾದ ನೀರನ್ನು ಪಂಪ್ ಮಾಡುವ ಸಾಮರ್ಥ್ಯ ಕಳೆದುಕೊಳ್ಳುತ್ತವೆ. ಮಾನವನ ಅಂಗರಚನೆಯಲ್ಲಿ ಬದಲಾವಣೆಗಳಾಗುತ್ತವೆ. ಅಳತೆಯಲ್ಲಿ ಎತ್ತರ, ಗಾತ್ರದಲ್ಲಿ ಹೆಚ್ಚಳ, ದಪ್ಪನಾದ ದೇಹ, ಮೂಳೆಗಳ ಸಾಂದ್ರತೆ ಹೆಚ್ಚಳದಿಂದ ತೂಕದಲ್ಲಿ ಹೆಚ್ಚಳವಾಗುತ್ತದೆ. ವಾಯುಮಂಡಲದಲ್ಲಿ ವಿಕಿರಣಶೀಲತೆ ಹೆಚ್ಚಾಗಿ ಜೀವನ ನರಕಸದೃಶವಾಗುತ್ತದೆ.

ಭೂಮಿಯ ಗುರುತ್ವ ಹೆಚ್ಚಳವು ಸೂರ್ಯನ ಮೇಲೂ ಪರಿಣಾಮ ಬೀರುತ್ತದೆ. ಆಗ ಸೂರ್ಯನೂ ಸಮತೋಲನ ತಪ್ಪಿ ಎಣ್ಣೆ ಹೊಡೆದಂತೆ ಓಲಾಡುತ್ತದೆ. ಸೂರ್ಯನ ಆಂತರಿಕ ಬಿಸಿಯು ಪ್ಲಾಸ್ಮಾದಿಂದ ಬೇರ್ಪಡಲು ಪ್ರಯತ್ನಿಸುತ್ತದೆ. ಗುತ್ವಾಕರ್ಷಣೆಯ ಹಠಾತ್ ಬದಲಾವಣೆಯಿಂದ ಹೈಡ್ರೋಜನ ಅನಿಲ ಹೀಲಿಯಂ ಆಗಿ ಪರಿವರ್ತನೆಯಾಗುವ ಕ್ರಿಯೆ ವೇಗವಾಗುತ್ತದೆ ಮತ್ತು ಬೃಹತ್ ಪ್ರಮಾಣದ ಶಕ್ತಿ ಬಿಡುಗಡೆಯಾಗುತ್ತದೆ. ಭೂಮಿಯ ಮೇಲಿನ ಜೀವಿಗಳನ್ನು ಕೊಲ್ಲಲು ಇಷ್ಟು ಶಕ್ತಿ ಸಾಕಲ್ಲವೇ? ಇದು ಹೀಗೆಯೇ ಆಗುತ್ತದೆ ಎಂದು ನಿಖರವಾಗಿ ಹೇಳಲು ಆಗದಿದ್ದರೂ ಹೀಗೆ ಆಗಬಹುದು ಎಂದು ಕೆಲವು ಸಾಧ್ಯತೆಗಳನ್ನು ನಿಮ್ಮ ಮುಂದೆ ಇಡಬಹುದು.

# ಹೇಳದೆ ಉಳಿದ ಮಾತು

ಕಷ್ಟ ಸುಖದಿಂದ ಕೂಡಿರುವ ಈ ಹೋರಾಟದ ಬದುಕು ಕ್ಷಣಿಕ. ಇಲ್ಲಿ ನಾವು ಎಷ್ಟು ಕಾಲ ಬದುಕುತ್ತೇವೆ ಎನ್ನುವುದು ಮುಖ್ಯವಲ್ಲ. ನಾವು ಹೇಗೆ ಜೀವಿಸಿದ್ದೇವೆ ಎನ್ನುವುದು ಮುಖ್ಯವಾಗುತ್ತದೆ. ಮಿಂಚಿಹೋದ ಕಾಲಕ್ಕೆ ಚಿಂತಿಸಿ ಫಲವಿಲ್ಲ ಎನ್ನುವಂತೆ ಬದುಕಿನ ಪಯಣದಲ್ಲಿ ನಮ್ಮ ಪ್ರೀತಿ ಪಾತ್ರರಿಗೆ ಹೇಳದೆ ಉಳಿದಿರುವ ಮಾತುಗಳು ಅನೇಕ ಬಾರಿ ಮನಸ್ಸಿಗೆ ನೋವು ಕೊಡುತ್ತದೆ. ಒಮ್ಮೆ ಆ ಮಾತುಗಳನ್ನು ಹೇಳಿದ್ದರೆ ಹೃದಯದ ಭಾರ ಇಳಿಯುತ್ತಿತ್ತು ಎಂದು ಎಷ್ಟೋ ಬಾರಿ ಅನಿಸುತ್ತದೆ.


ಭಗವಾನ್ ಬುದ್ಧನ ಶಾಂತಿ ಸಂದೇಶವನ್ನು ಕೇಳಲು ಬೌದ್ಧ ಸನ್ಯಾಸಿಗಳು, ರಾಜರು, ಹಿರಿಯರು, ಕಿರಿಯರು ಎಲ್ಲರೂ ನೆರೆದಿದ್ದರು. ಬುದ್ಧನು ಶಾಂತಿ ಸಂದೇಶವನ್ನು ಸಾರುತ್ತಾ ಮನುಷ್ಯನ ಆಯಸ್ಸು ಎಷ್ಟು ಯಾರಾದರೂ ಹೇಳುವಿರಾ ಎಂಬ ಪ್ರಶ್ನೆಯನ್ನು ಕೇಳುತ್ತಾನೆ. ಆಗ ಒಬ್ಬರು ನೂರು, ಅರವತ್ತು, ಎಪ್ಪತ್ತು ಹೀಗೆ ಬೇರೆ ಬೇರೆ ವರ್ಷಗಳನ್ನು ಹೇಳುತ್ತಾರೆ. ಆಗ ಬುದ್ಧನು ಇದಾವುದೂ ಸರಿ ಉತ್ತರವಲ್ಲ, "ಮನುಷ್ಯನ ಆಯಸ್ಸು ಒಂದು ಉಸಿರಿನಷ್ಟು, ಒಂದು ಕ್ಷಣದಷ್ಟು ಮಾತ್ರ ಎಂದು ಹೇಳುತ್ತಾ ಹೋದ ಉಸಿರು ಬರದಿದ್ದರೆ ಅಥವಾ ಬಂದ ಉಸಿರು ಹೋದರೆ ಅಲ್ಲಿಗೆ ನಮ್ಮ ಬದುಕು ಮುಗಿದು ಹೋಗುತ್ತದೆ" ಎಂದು ಹೇಳುತ್ತಾನೆ. ಹಾಗಾಗಿ ಈ ಕ್ಷಣಿಕ ಬದುಕಿನಲ್ಲಿ ಪ್ರತಿಯೊಂದು ಕ್ಷಣವನ್ನು ಅರ್ಥಪೂರ್ಣವಾಗಿ ಕಳೆಯಬೇಕು. ನಾವು ಹೇಳಬೇಕೆಂದುಕೊಂಡಿದ್ದ ಮಾತುಗಳನ್ನು ನಮಗ ನಿಸಿದ ಕ್ಷಣದಲ್ಲೇ ಆಡಬೇಕು ಇಲ್ಲವಾದರೆ ಕೆಲವು ಸಂದರ್ಭದಲ್ಲಿ ನಾವು ಹೇಳಬೇಕೆಂದುಕೊಂಡ ಮಾತುಗಳು ಹೇಳದೆ ಹಾಗೆ ಉಳಿದುಕೊಳ್ಳುತ್ತದೆ. ಅದು ನಮ್ಮನ್ನು ಜೀವನ ಪರ್ಯಂತ ಕಾಡುತ್ತದೆ.



ಚೇತನ ಭಾರ್ಗವ
ಬೆಂಗಳೂರು ಹವ್ಯಾಸಿ ಬರಹಗಾರ್ತಿ

Scan For Digital Colourful
HAMPI TIMES E-paper

ಸಂಬಂಧದಲ್ಲಿ ಅತ್ತೆಯಾದರೂ ಅವರು ತೋರಿದ ಪ್ರೀತಿ, ಅಮ್ಮ ಮತ್ತು ಸ್ನೇಹಿತೆಗಿಂತ ಹೆಚ್ಚು. ಒಂದು ಮಾದರಿ ಹೆಣ್ಣಿನ ಪರಿಪೂರ್ಣತೆ ಅವರಲ್ಲಿತ್ತು. ಮಗಳಾಗಿ, ಅಕ್ಕನಾಗಿ, ತಂಗಿಯಾಗಿ, ಹೆಂಡತಿಯಾಗಿ, ಸೊಸೆಯಾಗಿ, ತಾಯಿಯಾಗಿ, ಅತ್ತಿಗೆಯಾಗಿ, ಅತ್ತೆಯಾಗಿ, ಅಜ್ಜಿಯಾಗಿ, ಶಿಕ್ಷಕಿಯಾಗಿ ಒಟ್ಟಿನಲ್ಲಿ ಉತ್ತಮ ಗೃಹಿಣಿ ಮತ್ತು ಉದ್ಯೋಗಸ್ಥೆಯಾಗಿ ಎಲ್ಲಾ ಕರ್ತವ್ಯಗಳನ್ನು ಪ್ರೀತಿಯಿಂದ ಅವರು ನಿಭಾಯಿಸಿದ ರೀತಿಯನ್ನು ನಾನು ಯಾರಲ್ಲೂ ನೋಡಿಲ್ಲ.



ನನ್ನ ಅತ್ತೆ ಬಹಳ ಮೃದು ಸ್ವಭಾವದವರು. ಇದ್ದದ್ದು ಒಬ್ಬನೇ ಮಗ. ಆಗಿನ ಕಾಲದಲ್ಲೇ ಬಿ. ಎಸ್ಸಿ ಪದವಿಧರೆ ಆಗಿದ್ದರೂ, ಮಗ 3ನೇ ತರಗತಿಯಲ್ಲಿದ್ದಾಗ ಮನೆಯಲ್ಲಿ ಓದುವ ಸಲುವಾಗಿ ನಾಲ್ಕೈದು ಮಕ್ಕಳನ್ನು ಇಟ್ಟುಕೊಂಡು ಜೊತೆಯಲ್ಲಿ ಟಿಸಿಎಚ್ ಪರೀಕ್ಷೆಯಲ್ಲಿ ಅತ್ಯುತ್ತಮ ಶ್ರೇಣಿಯಲ್ಲಿ ತೇರ್ಗಡೆಯಾಗಿ ಸರಕಾರಿ ಶಾಲೆಗಳಲ್ಲಿ ಸೇವೆ ಸಲ್ಲಿಸಿದರು. ಅವರ ಅತ್ತೆಯನ್ನು ಮಗುವಿನಂತೆ ಅಕ್ಕರೆಯಿಂದ ನೋಡಿಕೊಂಡಿದ್ದರು. ಮಕ್ಕಳ ಪ್ರೀತಿಯ ವಿಮಲ ಟೀಚರ್ ಆದರು.

ನಾನು ಮದುವೆಯಾಗಿ ಅವರ ಮನೆಗೆ ಬಂದಾಗ ನನ್ನನು ಕಪ್ಪೆ ಚಿಪ್ಪಿನ ಮುತ್ತಂತೆ ಜೋಪಾನ ಮಾಡುತ್ತಿದ್ದರು. ನಾವಿಬ್ಬರೂ ಅತ್ತೆ ಸೊಸೆ, ಅಮ್ಮ ಮಗಳು ಅನ್ನುವುದಕ್ಕಿಂತ ಬೆಸ್ಟ್ ಫ್ರೆಂಡ್ಸ್ ಆಗಿದ್ದೆವು. ಅವರ ಜೀವನಾನುಭವ, ಸಿಹಿ ಕಹಿ ಘಟನೆಗಳನ್ನೆಲ್ಲ ಹಂಚಿಕೊಳ್ಳುವುದರ ಜೊತೆಗೆ ಬದುಕಿನ ನಾನಾ ಮಜಲುಗಳ ಬಗ್ಗೆ ಅರಿವನ್ನು ಮೂಡಿಸಿ ಪರಿಸ್ಥಿಗಳನ್ನು ಉತ್ತಮವಾಗಿ ನಿಭಾಯಿಸುವ ವಿಶ್ವಾಸ ತುಂಬುತ್ತಿದ್ದರು. ನಾವು ಹರಟಲು ಶುರು ಮಾಡಿದರೆ ಸಮಯ ಹೋದದ್ದೇ ತಿಳಿಯುತ್ತಿರಲಿಲ್ಲ . ನಮ್ಮಿಬ್ಬರಲ್ಲೂ ಹೊಂದಾಣಿಕೆ ಮತ್ತು ಸಾಮ್ಯತೆ ಇತ್ತು.

ಎಲ್ಲಾದರೂ ಸಭೆ ಸಮಾರಂಭಗಳಿದ್ದರೆ ನನಗೆ ಸೀರೆ ಉಡಿಸಿ ಶೃಂಗಾರ ಮಾಡಿ ತಾವು ಹೊರಡುತ್ತಿದ್ದರು. ಶಾಲೆಗೆ 22 ದಿನಗಳ ಕಾಲ ರಜಾ ಹಾಕಿ ನನ್ನ ಬಾಣಂತನ ನೆರವೇರಿಸಿ ತವರಿಗೆ ಕಳುಹಿಸಿಕೊಟ್ಟಿದ್ದರು. ಸಂಗೀತ, ಭಜನೆ , ತಾಳಮದ್ದಲೆ, ಮಕ್ಕಳ ನಾಟಕ , ಹಾಡು ಹೀಗೆ ವಿಧ ವಿಧದ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಸದಾ ತಮ್ಮನ್ನು ತೊಡಗಿಸಿಕೊಳ್ಳುತ್ತಿದ್ದರು. ಅವರ ಮನಸ್ಸು ಬಹಳ ಪರಿಶುದ್ಧ . ಸದಾ ಎಲ್ಲರಿಗೂ ಒಳಿತನ್ನೆ ಬಯಸುತ್ತಿದ್ದ ಜೀವ. ತನಗೆ ನೋವು ಮಾಡಿದವರಿಗೂ ಒಳ್ಳೆಯದಾಗಲಿ ಸ್ವಾಮಿ ಒಳ್ಳೆಯ ಬುದ್ಧಿ ಕೊಡಲಿ ಎಂದು ಹರಸುತ್ತಿದ್ದರು. ಸಂಪ್ರದಾಯಸ್ಥರಾಗಿದ್ದರೂ ಆಧುನಿಕತೆಯನ್ನು ಒಪ್ಪಿಕೊಳ್ಳುವ ಮನಸ್ಥಿತಿ ಅವರಿಗೆ ಇತ್ತು.

ಯಾರಲ್ಲೂ ಭೇಧ ಭಾವ ಮಾಡುತ್ತಿರಲ್ಲಿಲ್ಲ. ಯಾವುದೇ ಸಭೆ ಸಮಾರಂಭಗಳಿಗೆ ಹೋದರೂ ತನ್ನಿಂದಾಗುವ ಎಲ್ಲಾ ಕೆಲಸಗಳನ್ನು ಮನೆಯವರಂತೆ ಆ ಮನೆಗೆ ಸರಿಹೋಗುವಂತೆ ಮಾಡುತ್ತಿದ್ದರು.

ಮೊಮ್ಮಗಳೆಂದರೆ ಅವರಿಗೆ ಪಂಚಪ್ರಾಣ. ಅವಳೊಂದಿಗಿರಲು ಐದಾರು ವರುಷಗಳ ಕಾಲ ಸರ್ಕಾರಿ ಸೇವೆ ಮಾಡುವ ಅವಕಾಶವಿದ್ದರೂ ಸ್ವಯಂ ನಿವೃತ್ತಿ ಪಡೆದರು. ಅವಳಿಗೆ ಹಾಡು ಭಜನೆ, ನೃತ್ಯದ ಅಡಿಪಾಯ ಹಾಕಿಕೊಟ್ಟರು. ನಾನು ಮತ್ತು ನನ್ನ ಮಗಳು ಅವರ ಪ್ರೀತಿಯ ಸುಧೆಯಲ್ಲಿ ಸಂಪೂರ್ಣವಾಗಿ ಮಿಂದಿದ್ದೇವೆ.

ಇದನ್ನೆಲ್ಲ ಬರೆಯಬೇಕಾದರೆ ನನ್ನ ಮನಸು ಭಾರವಾಗುತ್ತಿದೆ. ಕಣ್ಣಂಚು ತೇವವಾಗುತ್ತಿದೆ. ಈಗ ಆರು ವರುಷಗಳಿಂದ ಅವರ ನೆನಪು ಮಾತ್ರ ನಮ್ಮ ಜೊತೆಗಿರುವುದು.

ನನ್ನ ಅತ್ತೆಗೆ ನಾಲ್ಕೈದು ದಿನದಿಂದ ಸುಸ್ತು ಹಾಗೂ ಸಣ್ಣ ಜ್ವರ, ಬರುತ್ತಿತ್ತು. ಅವರ ತಮ್ಮನೇ ವೈದ್ಯರಾಗಿದ್ದರಿಂದ, ಎಲ್ಲಾ ಪರೀಕ್ಷೆಯನ್ನು ಒಮ್ಮೆ ಮಾಡಿಸಿ ಬಿಡೋಣ ಎಂದು ಅವರ ಮನೆಗೆ ಕರೆದುಕೊಂಡು ಹೋದರು. ನಂತರ ಅವರಿಗೆ ರಕ್ತ ಪರೀಕ್ಷೆ ಹೀಗೆ ಬೇರೆ ಬೇರೆ ರೀತಿಯ ಎಲ್ಲಾ ಪರೀಕ್ಷೆಯನ್ನು ಮಾಡಿಸಲಾಯಿತು. ಎಲ್ಲಾ ಪರೀಕ್ಷೆಯ ರಿಪೋರ್ಟ್ ಕೂಡ ನಾರ್ಮಲ್ ಎಂದು ಬಂದಿತು. ಆದರೂ ಸಣ್ಣ ಜ್ವರ ಹಾಗೂ ಸುಸ್ತು ಏಕೆ ಇದೆ ಎಂದು ಅವರ ತಮ್ಮನಿಗೆ ಸಂಶಯ ಬಂದು, ಬೋನ್ ಮ್ಯಾರೋ (ಮೂಳೆ ಮಜ್ಜೆ) ಪರೀಕ್ಷೆಯೊಂದು ಬಾಕಿ ಇದೆ ಅದನ್ನು ಮಾಡಿಸಿ ಬಿಡೋಣ ಎಂದು ಪರೀಕ್ಷಿಸಿದಾಗ ಅವರಿಗೆ ರಕ್ತದ ಕ್ಯಾನ್ಸರ್ ಇದೆ ಎಂದು ದೃಢಪಟ್ಟಿತು. ನಂತರ ಅವರನ್ನು ಹೆಚ್‌ಸಿಜಿ ಕ್ಯಾನ್ಸರ್ ಆಸ್ಪತ್ರೆಗೆ ಸೇರಿಸಲಾಯಿತು. ಅಲ್ಲಿ ಇನ್ಫೆಕ್ಷನ್ ಆಗುತ್ತದೆ ಎಂದು ಅವರನ್ನು ನೋಡಲು ದಿನಕ್ಕೆ ಒಬ್ಬರನ್ನು ಮಾತ್ರ ಬಿಡುತ್ತಿದ್ದರು. ಅಲ್ಲದೆ ನನ್ನ ಆರು ವರ್ಷದ ಮಗಳನ್ನು ಆಸ್ಪತ್ರೆಯ ಒಳಗೆ ಬಿಡುತ್ತಿರಲಿಲ್ಲ. ಹೇಗಿದ್ದರೂ ಒಂದು ಕೀಮೊ ಥೆರಪಿ ಆದ ಮೇಲೆ ಮನೆಗೆ ಹಿಂದಿರುಗುತ್ತಾರೆ ಎನ್ನುವ ವಿಶ್ವಾಸ ಹಾಗೂ ಭರವಸೆ ನನಗಿತ್ತು. ಆದರೆ ಆಸ್ಪತ್ರೆ ಸೇರಿ ನಾಲ್ಕೇ ದಿನಕ್ಕೆ ಅವರು ಭಗವಂತನ ಸಾನಿಧ್ಯವನ್ನು ಸೇರಿಕೊಂಡರು. ಎರಡು ದಿನ ತಮ್ಮನ ಮನೆಗೆ ಹೋಗಿ ಬರುತ್ತೇನೆಂದು ಹೋದವರು, ಇನ್ನೂ ಎಂದಿಗೂ ಮನೆಗೆ ಹಿಂತಿರುಗುವುದಿಲ್ಲವೆಂಬ ವಿಷಯ ಕೇಳಿ ನನಗೆ ದೊಡ್ಡ ಆಘಾತವಾಯಿತು. ಅವರು ನಮ್ಮೊಂದಿಗೆ ದೈಹಿಕವಾಗಿ ಇಲ್ಲ ಎನ್ನುವ ವಿಷಯವನ್ನು ಜೀರ್ಣಿಸಿಕೊಳ್ಳಲು ನಮಗೆ ಆಗುತ್ತಿರಲಿಲ್ಲ. ಅವರಿಗೆ ಕ್ಯಾನ್ಸರ್ ಎಂದು ತಿಳಿದ ಮೇಲೆ ಅವರೊಂದಿಗೆ ಫೋನಿನಲ್ಲಿ ಮಾತನಾಡಿದ್ದರು, ಹಠಹಿಡಿದು ಆಸ್ಪತ್ರೆಗೆ ಹೋಗಿ"ನಿಮಗೆ ಏನು ಆಗುವುದಿಲ್ಲ, ಮಾನಸಿಕವಾಗಿ ಧೈರ್ಯವಾಗಿ ಇರಿ ನಿಮ್ಮೊಂದಿಗೆ ನಾವೆಲ್ಲ ಇದ್ದೇವೆ" ಎಂದು ನೇರವಾಗಿ ಹೇಳದೆ ಉಳಿದ ಮಾತು ಇಂದಿಗೂ ನನಗೆ ಕಾಡುತ್ತಿದೆ. ಅಲ್ಲದೆ ಅವರಿಗೆ ಜಾತಕ ನೋಡುವ ವಿದ್ಯೆ ಚೆನ್ನಾಗಿ ಗೊತ್ತಿತ್ತು. ಹೊಸ ಸಂವತ್ಸರ ಬಂದ ಕೂಡಲೇ ಎಲ್ಲರ ಜಾತಕದ ಫಲವನ್ನು ನೋಡಿ ಹೇಳುತ್ತಿದ್ದರು. ಇದರ ಬಗ್ಗೆ ಹಾಗೂ ಇನ್ನೂ ಅನೇಕ ವಿಷಯಗಳು, ಆಡದೆ ಇರುವ ಮಾತುಗಳು ಹಾಗೇ ಉಳಿದುಹೋಗಿದೆ. ಅಮ್ಮನಂತೆ, ಸಹೋದರಿಯಂತೆ, ಸ್ನೇಹಿತೆಯಂತೆ ಇದ್ದ ನನ್ನ ಅತ್ತೆ ನನ್ನ ಮನದಲ್ಲಿ ಎಂದೆಂದೂ ಜೀವಂತ. ಅವರು ನಮ್ಮೊಂದಿಗೆ ಇನ್ನೊಂದಷ್ಟು ವರುಷಗಳ ಕಾಲ ಇರಬೇಕಿತ್ತು. ಎಲ್ಲದಕ್ಕೂ ನಮಗೆ ಯೋಗ ಬೇಕಲ್ಲವೇ. ಅವರೊಡನೆ ಆಡದ ಹೇಳದ ಸಾವಿರಾರು ಮಾತುಗಳು ಮಾತ್ರ ಹಾಗೆ ಉಳಿದು ಹೋಗಿದೆ.

ನೆನಪಿನ ಉಸಿರಿನಲ್ಲಿ ಅವರು ಸದಾ ಹಸಿರು

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA, PRGI No:KARKAN/2023/88055

## ಕವಿ ಮನಸು

### ಪುಟ್ಟಿಯ ಕನಸು

ಪುಟ್ಟಿಗೆ ಬಿತ್ತು ಕನಸೊಂದು
ರಾಮರಾಜ್ಯದ ನನಸೊಂದು (ಪ )

ಮಳೆಯೂ ಬೆಳೆಯೂ ತೆನೆಯು
ಗೊನೆಯು
ನಿರ್ಮಲ ಪರಿಸರ ಎಲ್ಲ ಕಡೆ
ಶುದ್ಧ ಗಾಳಿಯು ತಿಳಿಗೊಳ ಜಲವು
ಪ್ರಾಣಿ ಪಕ್ಷಿಗಳ ಮುಕ್ತ ನಡೆ (1)

ಸತ್ಯವಂತರಿಗೆ ಸನ್ಮಾನ
ಶಿಷ್ಟರಿಗೆಲ್ಲೆಡೆ ಸಮ್ಮಾನ
ಪ್ರತಿಭಾವಂತಗೆ ಬಹುಮಾನ
ಬಡವಗೆ ಅಬಲಗೆ ಉತ್ತೇಜನ (2)

ಮೋಸಕಿರಲಿಲ್ಲ ಅವಕಾಶ
ಎಲ್ಲಾ ತಿಳಿ ತಿಳಿ ಆಕಾಶ
ಕಿರಿಯಗೆ ಹಿರಿಯನ ಸಂದೇಶ
ಅಂತರಂಗಕೆ ಉತ್ಕರ್ಷ (3)

ತಟ್ಟನೆ ಪುಟ್ಟಿ ಕನಸಿಂದೆದ್ದು
ಕಂಗಳ ಮೆಲ್ಲನೆ ಒರೆಸಿದಳು
ಇಂತ ಲೋಕವಿರೆ ಎಂತ
ಚಂದವೆಂದು ಮನದಲಿ ಕುಣಿ
ಕುಣಿದಾಡಿದಳು (4)

– ಶೇಖರಯ್ಯ ಟಿ ಎಚ್ ಎಂ
ಶಿಕ್ಷಕರು, ಗೆದ್ದಲಗಟ್ಟೆ, ಕೂಡ್ಲಿಗಿ

### ಸಾವಿತ್ರಿ ಬಾಪುಲೆ

ದೇಶದ ಪ್ರಥಮ ಮಹಿಳಾ ಶಿಕ್ಷಕಿ
ಸಾವಿರಾರು ಹೆಣ್ಣು ಮಕ್ಕಳಿಗೆ ಪ್ರೇರಕಿ
ಉನ್ನತ ವಿಚಾರಗಳ ಪ್ರತಿಪಾದಕಿ
ಸುಶಿಕ್ಷಿತ ಸಮಾಜದ ನಾಯಕಿ

ಮಹಾರಾಷ್ಟ್ರದ ಸಾತಾರ ಜಿಲ್ಲೆಯಲ್ಲಿ
ಜನಿಸಿದರು
ಸಮಾಜ ಸುಧಾರಕ
ಜ್ಯೋತಿಬಾಪುಲೆರವರನ್ನು ವರಿಸಿದರು
ಶಿಕ್ಷಕರಾಗಿ ಅಕ್ಷರ ದಾಸೋಹದ
ಸಾರಥಿಯಾದರು
ಶೋಷಿತರಿಗೆ ಜ್ಞಾನದ ಅರಿವನ್ನು
ಮೂಡಿಸಿದರು

ಅವಮಾನ ನಿಂದನೆಗಳಿಗೆ ಲೆಕ್ಕಿಸದೆ
ದಿಟ್ಟ ತನದಿ ಹಿಡಿದ ಪಟ್ಟು ಬಿಡದೆ
ಸ್ಥಾಪಿಸಿದರು ಮಹಿಳಾ ಖಾಸಗಿ ಶಾಲೆ
ಸರಸ್ವತಿಯ ಪ್ರತಿರೂಪಿ ಸಾವಿತ್ರಿ ಬಾಪುಲೆ

–ಚೇತನ ಭಾರ್ಗವ, ಬೆಂಗಳೂರು


## ಬೇಕಾಗಿದ್ದಾರೆ

ವಿಜಯನಗರ ಜಿಲ್ಲಾ ಕೇಂದ್ರದಿಂದ ಪ್ರಕಟವಾಗುತ್ತಿರುವ ಹಂಪಿ ಟೈಮ್ಸ್ ದಿನಪತ್ರಿಕೆಗೆ ಜಾಹೀರಾತು ಪ್ರತಿನಿಧಿಗಳು /ಏಜೆಂಟರು ಬೇಕಾಗಿದ್ದಾರೆ. ಆಸಕ್ತರು ತಮ್ಮ ಸ್ವ–ವಿವರದೊಂದಿಗೆ ಸಂಪರ್ಕಿಸಿ

ಹಂಪಿ ಟೈಮ್ಸ್
ವಾಲ್ಮೀಕಿ ಸರ್ಕಲ್ ಹತ್ತಿರ,
ಹೊಸಪೇಟೆ–583201
ಮೊ: 94486 33038
Email:hampitimes@gmail.com


# ಹಾಲುಮತ ಸಮಾಜದ ಸಂಘಟನೆಗೆ ಸಂಸ್ಕೃತಿ ವೈಭವ ಪೂರಕ ಶಕ್ತಿ

## ಪುರಸಭೆ ಅಧ್ಯಕ್ಷ ಎಂ.ಮರಿರಾಮಣ್ಣ ಇಂಗಿತ | ವೈಭವಕ್ಕೆ ಧರ್ಮದರ್ಶಿ ಕರಿಗಾರ ನೀಲಪ್ಪ 25ಸಾವಿರ



■ **ಹಂಪಿ ಟೈಮ್ಸ್ ಹಗರಿಬೊಮ್ಮನಹಳ್ಳಿ**

ಶ್ರೀ ಕಾಗಿನೆಲೆ ಮಹಾಸಂಸ್ಥಾನ ಕನಕ ಗುರುಪೀಠದಲ್ಲಿ ಜ.12ರಿಂದ 14ವರೆಗೆ ಹಾಲುಮತ ಸಂಸ್ಕೃತಿ ವೈಭವದ ಮೂಲಕ ಪೀಠದ ಗುರುಗಳು ಹಾಲು ಮತ ಸಮಾಜದ ಸಂಘಟನೆಯನ್ನು ಬಲಗೊಳಿಸು ತ್ತಿರುವುದು ಸಮಾಜದ ಶಕ್ತಿಯಾಗಿದೆ ಎಂದು ಪುರಸಭೆ ಅಧ್ಯಕ್ಷ ಎಂ.ಮರಿರಾಮಣ್ಣ ತಿಳಿಸಿದರು.

ಪಟ್ಟಣದ ಸರ್ಕ್ಯೂಟ್ ಹೌಸ್‌ನಲ್ಲಿ ಹಾಲಮತ ಸಂಸ್ಕೃತಿ ವೈಭವದ ಬಿತ್ತಿಚಿತ್ರ ಅನಾವರಣಗೊಳಿಸಿ ಬಳಿಕ ಸುದ್ದಿಗಾರರೊಂದಿಗೆ ಶುಕ್ರವಾರ ಮಾತನಾಡಿದರು. ರಾಯಚೂರು ಜಿಲ್ಲೆಯ ತಿಂತಣಿ ಬ್ರಿಜ್‌ನ ಶ್ರೀ ಕಾಗಿನೆಲೆ ಮಹಾಸಂಸ್ಥಾನ ಕನಕ ಗುರುಪೀಠದಲ್ಲಿ ಸಂಸ್ಕೃತಿ ವೈಭವದ ಮೂಲಕ ಹಾಲುಮತ ಸಮಾಜವನ್ನು ಶ್ರೀಗಳು ಅತ್ಯಂತ ಬಲಿಷ್ಠಗೊಳಿ ಸುತ್ತಿದ್ದಾರೆ. ಸಮಾಜಕ್ಕೆ ಒಂದು ಉತ್ತಮ ಸಂದೇಶ ವನ್ನು ನೀಡುವ ನಿಟ್ಟಿನಲ್ಲಿ ಆಯೋಜಿಸಲಾದ ಹಾಲುಮತ ವೈಭವವನ್ನು ಸಮಾಜ ಬಾಂಧವರು ಯಶಸ್ವಿಗೊಳಿಸಬೇಕು. ಈ ನಿಟ್ಟಿನಲ್ಲಿ ಪೀಠಕ್ಕೆ ಪರಸ್ಪರರ ಕೈಜೋಡಿಸುವ ಅಗತ್ಯವಿದೆ ಎಂದರು. ಜ.14 ಸಿದ್ದರಾಮೇಶ್ವರ ಜಯಂತ್ಯುತ್ಸವ ಜರುಗಲಿದೆ. ಟಗರಿನ ಕಾಳಗ, ಎತ್ತುಗಳ ಭಾರ ಎಳೆಯುವ ಸ್ಪರ್ಧೆ ನಡೆಯಲಿದ್ದು, ಒಟ್ಟು ಲಕ್ಷ ರೂ.ಬಹುಮಾನ ನೀಡಲಾಗುತ್ತದೆ ಎಂದರು.

ಕನಕಗುರು ಪೀಠದ ತಾಲೂಕು ಧರ್ಮದರ್ಶಿ ಕರಿಗಾರ ಚಂದ್ರಪ್ಪ ಮಾತನಾಡಿ, ಜ.12ರಿಂದ 14ವರೆಗೆ ನಡೆವ ಹಾಲುಮತ ಸಂಸ್ಕೃತಿ ವೈಭವಕ್ಕೆ ತಾಲೂಕಿನಿಂದಲೂ ಅಗತ್ಯ ಸಿದ್ಧತೆ ನಡೆಸಲಾಗುವುದು. ಸಮಾಜ ಬಾಂಧವರನ್ನು ಸಂಪರ್ಕಿಸಿ ಶಿಬಿರದ ಯಶಸ್ಸಿಗೆ ಕೋರಲಾಗುವುದು. ಪೀಠದಲ್ಲಿ ಜ.12ರಂದು ಶಿವಸಿದ್ದ ಯೋಗ ಮಂದಿರಕ್ಕೆ ಶಿಲಾನ್ಯಾಸ, ಪೂಜಾರಿಗಳ ಸಮಾವೇಶ ನಡೆಯಲಿದೆ. ಜ.13ರಂದು ನಾನಾ ಕ್ಷೇತ್ರಗಳಲ್ಲಿ ಗುರುತರ ಸೇವೆ ಸಲ್ಲಿಸಿದ ಸಾಧಕರಿಗೆ ತಲಾ 50 ಸಾವಿರ ರೂ.ಮೊತ್ತದ ಹಾಲುಮತ ಭಾಸ್ಕರ, ಸಿದ್ಧಶ್ರೀ ಪ್ರಶಸ್ತಿ ಪ್ರಧಾನ ಮಾಡಲಾಗುವುದು. ಹಾಲುಮತ ವೈಭವವನ್ನು ಯಶಸ್ವಿಗೊಳಿಸಲು ತಾಲೂಕಿನಿಂದ ಪೂರಕ ಸಿದ್ಧತೆ ಕೈಗೊಳ್ಳಲಾಗು ವುದು ಎಂದರು.

ಕಾಂಗ್ರೆಸ್ ಬ್ಲಾಕ್ ಅಧ್ಯಕ್ಷ ಕೋರಿ ಗೋಣಿಬಸಪ್ಪ, ಸಮಾಜದ ಮುಖಂಡ ಚಿಂತ್ರಪಳ್ಳಿ ಬಣಕಾರ ಗೋಣೆಪ್ಪ, ಗ್ರಂಥಾಲಯ ನಿವೃತ್ತ ಅಧಿಕಾರಿ ಉಪಾಧ್ಯಕ್ಷ ಟಿ.ರಾಮಲಿಂಗಪ್ಪ, ಮುಖಂಡ ಮಾಲವಿ ಗ್ರಾಮದ ಹ್ಯಾಳ್ಯದ ಚನ್ನಬಸಪ್ಪ ಮಾತನಾಡಿದರು. ಹರೇಗೊಂಡನಹಳ್ಳಿ ರಂಗ ಭೂಮಿ ಕಲಾವಿದ ಡಾ.ಉಮಾಶಂಕರ, ಕರಿಗಾರ ಚಂದ್ರಪ್ಪ, ಬಣಕಾರ ಗೋಣೆಪ್ಪ ಇವರನ್ನು ಸಮಾಜದ ಮುಖಂಡರು ಸನ್ಮಾನಿಸಿದರು. ಮುಖಂಡರಾದ ಪರಶುರಾಮ, ಭರ್ಮನಗೌಡ, ನೆಲ್ಕುದ್ರಿ ಶೇಖರಪ್ಪ, ಕೊಟ್ರೇಶ, ಡೊಳ್ಳಿನ ನಾಗಪ್ಪ, ಹುಡೇದ್ ಹುಲುಗಪ್ಪ ಉಪಸ್ಥಿತರಿದ್ದರು.

# ಅಕ್ಷರದವ್ವ ಮಾತೆ ಸಾವಿತ್ರಿ ಬಾಫುಲೆ ಜಯಂತಿ ಆಚರಣೆ



■ **ಹಂಪಿ ಟೈಮ್ಸ್ ಹೊಸಪೇಟೆ:**

ಮಾತೆ ಸಾವಿತ್ರಿಬಾಫುಲೆ ಅವರು ಶೋಷಿತ ವರ್ಗದ ಜನರಿಗೆ ಶಿಕ್ಷಣ ನೀಡಿ, ಸಮಾಜ ಸುಧಾರಣೆಗೆ ಅಪಾರ ಕೊಡುಗೆ ನೀಡಿದ್ದಾರೆ ಎಂದು ಕರ್ನಾಟಕ ರಾಜ್ಯ ರಸ್ತೆ ಬೀದಿಬದಿ ವ್ಯಾಪಾರಿಗಳ ಸಂಘದ ಜಿಲ್ಲಾಧ್ಯಕ್ಷ ನವೀನ್ ಕುಮಾರ್ ಹೇಳಿದರು.

ನಗರದ ಡಾ॥ ಬಿ.ಆರ್.ಅಂಬೇಡ್ಕರ್ ವೃತ್ತದಲ್ಲಿ ಸಾವಿತ್ರಿಭಾಫುಲೆ ಜಯಂತಿ ನಿಮಿತ್ತ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಮಾತನಾಡಿದರು. ದೇವನೂರು ಮಹದೇವ ಅವರ ನುಡಿಯಂತೆ ಭೂಮಿಗೆ ಬಿದ್ದ ಬೀಜ, ಎದೆಗೆ ಬಿದ್ದ ಅಕ್ಷರ ಎಂದಿಗೂ ಫಲ ನೀಡುತ್ತದೆ, ಎನ್ನುವಂತೆ ಅಕ್ಷರದ ಮಹತ್ವವನ್ನು ನೀಡಿದಂತಹ ಸಾವಿತ್ರಿಬಾಫುಲೆ ಅವರ ಜಯಂತಿ ಮನೆ ಮನೆಗಳಲ್ಲೂ ಆಚರಣೆ ಆಗಲಿ ಎಂದರು.

ಯುವ ಮುಖಂಡರಾದ ಭರತ್ ಕುಮಾರ್.ಸಿ.ಆರ್ ಮಾತನಾಡಿದರು.

ಮುಖಂಡರಾದ ಎ.ಬಸವರಾಜ, ಶೇಷು, ಕರಿಯಪ್ಪ, ಬೀದಿಬದಿ ವ್ಯಾಪಾರಿಗಳ ಸಂಘದ ತಾಲೂಕು ಅಧ್ಯಕ್ಷ ಹುಲುಗಪ್ಪ, ದಲಿತ ಸೇನೆ ಅಧ್ಯಕ್ಷರಾದ ಕೊಲ್ಲಾಪುರಿ, ನವ ಕರ್ನಾಟಕ ವೇದಿಕೆಯ ನಗರ ಘಟಕ ಅಧ್ಯಕ್ಷರಾದ ಯಲ್ಲಪ್ಪ, ಓಬಳೇಶ, ಗಂಗಾದರ, ಪಂಪಾಪತಿ, ವಿಜಯ ಕುಮಾರ್, ಸಂತೋಷ್, ಬಸವರಾಜ, ವಿಜಯಕುಮಾರ್, ಸೋಹೆಲ್, ಉದಯ್ ಮತ್ತಿತರರು ಹಾಗೂ ಬೀದಿಬದಿ ವ್ಯಾಪಾರಿಗಳ ಸಂಘದ ಪದಾಧಿಕಾರಿಗಳೂ, ದಲಿತ ಸಂಘಟನೆ ಮುಖಂಡರು, ಸ್ಲಂಸಂಘಟನೆ ಮುಖಂಡರು, ಕನ್ನಡಪರ ಸಂಘಟನೆ ಮುಖಂಡರು ಮತ್ತು ವಿವಿಧ ಸಂಘಟನೆಗಳ ಮುಖಂಡರು ಉಪಸ್ಥಿತರಿದ್ದರು.

# ಕಾನಹೊಸಹಳ್ಳಿಯಲ್ಲಿ ಭೀಮಾ ಕೋರೆಗಾಂವ್ ವಿಜಯೋತ್ಸವ ಆಚರಣೆ

■ **ಹಂಪಿ ಟೈಮ್ಸ್ ಕೂಡ್ಲಿಗಿ:**

ಭೀಮಾ ಕೋರೆಗಾಂವ್ ಯುದ್ಧಯು ದಲಿತರ ಪಾಲಿಗೆ ಸ್ವಾಭಿಮಾನದ ಉತ್ಸವವಾಗಿದೆ ಎಂದು ದಸಂಸ ಜಿಲ್ಲಾ ಸಂಚಾಲಕ ಎಸ್. ದುರುಗೇಶ್ ಕೂಡ್ಲಿಗಿ ಹೇಳಿದರು.

ತಾಲೂಕಿನ ಕಾನ ಹೊಸಹಳ್ಳಿ ಹೋಬಳಿಯಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ ಪ್ರೊ.ಬಿ.ಕೃಷ್ಣಪ್ಪ ಸ್ಥಾಪಿಸಿದ ಕರ್ನಾಟಕ ದಲಿತ ಸಂಘರ್ಷ ಸಮಿತಿ ಹಾಗೂ ದಲಿತ ಪರ ಸಂಘಟನೆಗಳಿಂದ ಹಮ್ಮಿಕೊಂಡಿದ್ದ ಭೀಮಾ ಕೋರೆಗಾಂವ್ 207ನೇ ವಿಜಯೋತ್ಸವ ಯಾತ್ರೆಯನ್ನು ಸಂಗೊಳ್ಳಿ ರಾಯಣ್ಣ ವೃತ್ತದಿಂದ ಚಾಲನೆ ನೀಡಿ ಮಾತನಾಡಿದರು. ಈ ಕಾರ್ಯಕ್ರಮದಲ್ಲಿ ದಸಂಸ ಜಿಲ್ಲಾ ಸಂಘಟನಾ ಸಂಚಾಲಕರಾದ ಕಂದಗಲ್ ಪರಶುರಾಮ್, ಬಿ.ಟಿ ಗುದ್ದಿ ದುರುಗೇಶ, ದಸಂಸ ತಾಲೂಕು ಸಂಚಾಲಕ ಎಳೆನೀರು ಗಂಗಾಧರ್, ಸಿದ್ದಾಪುರ ಈಶ್ವರಪ್ಪ, ಕಾನಮಡುಗು ದುರುಗಪ್ಪ, ಕರಿಬಸಪ್ಪ ಲೋಕಿಕೆರೆ, ಕಾನಮಡಗು ಫಕೀರಪ್ಪ, ಮುಗಪ್ಪ ಕೂಡ್ಲಿಗಿ, ಎನ್ ತಿಪ್ಪೇಶ್, ಕುರುಬರ ಸಮಾಜದ ಮುಖಂಡ ಜಿ ನಾಗೇಶ್, ಗ್ರಾ.ಪಂ ಉಪಾಧ್ಯಕ್ಷ ದುರುಗಪ್ಪ ಹುಲಿಕೆರೆ, ಕೆ ದುರುಗಪ್ಪ, ರುದ್ರಮುನಿ ತಿಪ್ಪೇಹಳ್ಳಿ, ಮಾಳೆಹಳ್ಳಿ ಎ.ಕೆ.ಮಂಜಪ್ಪ, ಕುಂಬಳಗುಂಟೆ ಮೈಲಪ್ಪ, ಶ್ರೀನಿವಾಸ್ ವಕೀಲರು, ಮಾಂತೇಶ್, ಅವಿನಾಶ್, ಮಾರುತಿ, ಕರಿಬಸಪ್ಪ, ಮಂಜುನಾಥ ಸೇರಿದಂತೆ ಹೊಸಳ್ಳಿಯ ದಲಿತ ಮುಖಂಡರು, ಯುವಕರು, ಸುತ್ತಮುತ್ತಲಿನ ದಲಿತ ಮುಖಂಡರು ಇದ್ದರು. ಈ ವೇಳೆ ಪೊಲೀಸ್ ಇಲಾಖೆಯ ಕೂಡ್ಲಿಗಿ ಡಿವೈಎಸ್ಪಿ ಮಲ್ಲೇಶಪ್ಪ ಮಲ್ಲಾಪುರ ನೇತೃತ್ವದಲ್ಲಿ ಪೊಲಿಸರು ಬಂದೋಬಸ್ತ್ ಕಲ್ಪಿಸಿದ್ದರು.



# ಮಕ್ಕಳಿಗೆ ಮಾನವೀಯ ಮೌಲ್ಯಗಳನ್ನು ತಿಳಿಸಿ ಮಹಿಳೆಯರ ಶಕ್ತಿ ಸಾವಿತ್ರಿ ಬಾಯಿಪುಲೆ

## ಗ್ರೇಡ್–2 ತಹಶೀಲ್ದಾರ್ ವಿ.ಕೆ. ನೇತ್ರಾವತಿ ಹೇಳಿಕೆ



■ **ಹಂಪಿ ಟೈಮ್ಸ್ ಕೂಡ್ಲಿಗಿ:**

ಸಾವಿತ್ರಿ ಬಾಯಿಪುಲೆ ಅವರು ಹೆಣ್ಣು ಮಕ್ಕಳ ಧ್ವನಿಯಾಗಿದ್ದರು ಎಂದು ಗ್ರೇಡ್–2 ತಹಶೀಲ್ದಾರ್ ವಿ.ಕೆ. ನೇತ್ರಾವತಿ ಹೇಳಿದರು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ಶುಕ್ರವಾರ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ತಾಲ್ಲೂಕು ಘಟಕದಿಂದ ಹಮ್ಮಿಕೊಂಡಿದ್ದ ಸಾವಿತ್ರಿಬಾಯಿ ಫುಲೆ ದಿನಾಚರಣೆ ಹಾಗೂ ಸಾವಿತ್ರಿ ಬಾಯಿ ಫುಲೆ ಉತ್ತಮ ಗುರುಮಾತೆ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಮಾತನಾಡಿದ ಅವರು, ನಾವು 21ನೇ ಶತಮಾನಕ್ಕೆ ಬಂದಿದ್ದರೂ ಈಗಲು ಹೆಣ್ಣು ಮಕ್ಕಳು ದುರ್ಬಲೆರೆ. ಹೆಣ್ಣುಮಕ್ಕಳು ಒಬ್ಬರೆ ಓಡಾಡಲು ಇಂದಿಗೂ ಹಿಂಜರಿಯುತ್ತಿದ್ದಾರೆ. ಇದನ್ನು ಹೋಗಲಾಡಿಸಲು ನಾವು ಪ್ರಯತ್ನ ಮಾಡಬೇಕು. ಬಾಲಕಿಯರಿಗಾಗಿ ಶಾಲೆ ತೆರೆದಿದ್ದು ಸಾವಿತ್ರಿ ಬಾಯಿ ಫುಲೆ ಅವರ ದೊಡ್ಡ ಕೊಡುಗೆಯಗಿದೆ. ಮಹಿಳಾ ಹಕ್ಕುಗಳಿಗಾಗಿ ಅವರು ಹೋರಾಟ ಮಾಡಿದರು. ಶಿಕ್ಷಣದ ಜೊತೆಗೆ ಮಕ್ಕಳಿ ಆದರ್ಶ ಮತ್ತು ಮಾನವೀಯ ಮೌಲ್ಯಗಳನ್ನು ಕಲಿಸಬೇಕಾಗಿದೆ. ಅಕ್ಷರದ ಜೊತೆಗೆ ವಿದ್ಯಾರ್ಥಿಗಳನ್ನು ಸತ್ಪಜೆಗಳಾಗಬೇಕು. ಇದಕ್ಕೆ ಶಿಕ್ಷಕರ ಕೊಡುಗೆ ಅಮೂಲ್ಯವಾಗಿದೆ ಎಂದರು.

ಕ್ಷೇತ್ರ ಶಿಕ್ಷಣಾಧಿಕಾರಿ ಪದ್ಮನಾಭ ಕರಣಂ ಕಾರ್ಯಕ್ರಮ ಉದ್ಘಾಟಿಸಿದರು. ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಬಿ.ಬಿ. ಶಿವಾನಂದ ಪ್ರಾಸ್ತಾವಿಕವಾಹಿ ಮಾತನಾಡಿದರು. ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ತಾಲ್ಲೂಕು ಅಧ್ಯಕ್ಷ ಗೌಡ್ರು ಕೊಟ್ರೇಶ್ ಅಧ್ಯಕ್ಷತೆ ವಹಿಸಿದ್ದರು.

ಕ್ಷೇತ್ರ ಸಮನ್ವಯಾಧಿಕಾರಿ ಎಸ್.ಎಸ್. ಜಗದೀಶ್, ಅಕ್ಷರ ದಸೋಹ ಸಹಾಯಕ ನಿರ್ದೇಶಕ ಕೆ.ಜೆ. ಅಂಜನೇಯ, ಶಿಕ್ಷಕರ ಸಂಘದ ಗೌರ್ವಧ್ಯಕ್ಷ ಆರ್. ವೆಂಕಟೇಶ್, ಖಜಾಂಚಿ ನಂದೀಶ್ ನಾಯ್ಕ್, ಕೊಟ್ಟೂರು ತಾಲ್ಲೂಕು ಅಧ್ಯಕ್ಷ ಡಿ.ಎಸ್. ಮರುಳನಗೌಡ, ಪದಾಧಿಕಾರಿಗಳಾದ ಟಿ.ಎಚ್.ಎಂ. ಶೇಖರಯ್ಯ, ಕೆ. ಜಿನಾಬೀ, ಗೀತಾ ಬಾಪ್ರೆ, ಪಿ.ವಿ. ಕೊತ್ಲಪ್ಪ, ಎರ್ರಿಸ್ವಾಮಿ, ಎನ್. ಪುಟ್ಟಪ್ಪ, ಎಚ್.ಜಿ. ಹನುಮಂತಪ್ಪ, ಪ್ರೌಢ ಶಾಲಾ ಸಹ ಶಿಕ್ಷಕರ ಸಂಘದ ಅಧ್ಯಕ್ಷ ಎಸ್.ವಿ. ಸಿದ್ದಾರಾಧ್ಯ, ಸಾವಿತ್ರಿ ಬಾಯಿ ಫುಲೆ ಸಂಘದ ಅಧ್ಯಕ್ಷೆ ವಸಂತಮ್ಮ ಪಾಲ್ಗೊಂಡಿದ್ದರು.

# ಜನಜಾಗೃತಿ ಸಮಾವೇಶದಿಂದ ಹಿಂದು ಮುಸ್ಲಿಂ ಭಾವೈಕ್ಯತೆಗೆ ದಕ್ಕೆ

■ **ಹಂಪಿ ಟೈಮ್ಸ್ ಕಂಪ್ಲಿ**



ವಕ್ಫ್ ಸಮಸ್ಯೆಗಳನ್ನ ಸರ್ಕಾರವೇ ಪರಿ ಪೂರ್ಣ ವಾಗಿ ಬಗೆಹರಿ ಸುವುದಾಗಿ ಮುಖ್ಯ ಮಂತ್ರಿಗಳೇ ಹೇಳಿರು ವಾಗ ಪಟ್ಟಣ ದಲ್ಲಿ ಜನ ಜಾಗೃತಿ ಸಮಾವೇಶ ನಡೆಸುವ ಅಗತ್ಯವೇ ಇಲ್ಲ ಎಂದು ಶಾಸಕ ಜೆ.ಎನ್.ಗಣೇಶ್ ಹೇಳಿದರು.

ಇಲ್ಲಿನ ಅತಿಥಿಗೃಹ ಆವರಣದಲ್ಲಿ ಶುಕ್ರವಾರ ನಡೆದ ಕಾಂಗ್ರೆಸ್ ಪ್ರಮುಖರ ಸಭೆಯಲ್ಲಿ ಮಾತನಾಡಿ, ಬೆಳಗಾವಿ ಅಧಿವೇಶನದಲ್ಲಿ ವಕ್ಫ್ ಕುರಿತು ಮುಕ್ತ ಚರ್ಚೆಗೆ ಅವಕಾಶವಿದ್ದಾಗ ಬಸವನಗೌಡ ಪಾಟೀಲ್ ಯತ್ನಾಳ್ ಉದ್ದೇಶಪೂರ್ವಕ ಗೈರಾಗಿದ್ದಾರೆ. ಪಟ್ಟಣ ದಲ್ಲಿ ವಕ್ಫ್ ಜನಜಾಗೃತಿ ಸಮಾವೇಶ ನಡೆಸುವುದರಿಂದ ಹಿಂದೂ ಮುಸ್ಲಿಂ ಗಲಾಟೆ ಸೃಷ್ಟಿಸಿ ಭಾವೈಕ್ಯತೆಗೆ ದಕ್ಕೆ ತರುವು ದಾಗಿದೆ. ಕಂಪ್ಲಿ ತಾಲೂಕಿನಲ್ಲಿ ವಕ್ಫ್‌ಗೆ ಸಂಬಂಧಿಸಿದ ಹಿಂದೂ, ಮುಸ್ಲಿಂ ಸೇರಿದಂತೆ ಎಲ್ಲರ ಹದಿನೆಂಟು ಅರ್ಜಿಗಳಿದ್ದು ಸಮಸ್ಯೆ ಬಗೆಹರಿಸುವಂತೆ ತಹಸೀಲ್ದಾರರಿಗೆ ಸೂಚಿಸಲಾಗಿದೆ. ವಕ್ಫ್ ನೋಟೀಸ್ ನೀಡುವುದಿಲ್ಲ ಎಂದು ಸರ್ಕಾರವೇ ಹೇಳಿದ್ದು ಪಟ್ಟಣಕ್ಕೆ ಬಂದು ಯತ್ನಾಳ್ ತಂಡ ಸಮಾವೇಶ ನಡೆಸುವ ನೈತಿಕತೆಯಿಲ್ಲ. ಕಂಪ್ಲಿ ಕ್ಷೇತ್ರದಲ್ಲಿ ಒಂದೇ ತಾಯಿ ಮಕ್ಕಳಂತೆ ಜೀವಿಸುತ್ತಿದ್ದು ರಾಜಕೀಯ ಲಾಭಕ್ಕಾಗಿ ನಡೆಸುತ್ತಿರುವ ಸಮಾವೇಶ ಶೋಭೆ ತರುವಂತಹದ್ದಲ್ಲ ಎಂದು ಹೇಳಿದರು.

ವಕ್ಫ್ ಸಲಹಾ ಸಮಿತಿ ಸದಸ್ಯ ಎನ್. ಹಬೀಬ್ ರೆಹಮಾನ್, ಪ್ರಮುಖರಾದ ಕೆ. ಮಸ್ತಾನ್ ವಲಿ, ಡಾ.ಎ.ಸಿ.ದಾನಪ್ಪ, ಸೈಯ್ಯದ್ ಮಹ್ಮದ್, ಖಾದ್ರಿ, ಭಟ್ಟ ಪ್ರಸಾದ್, ಕೆ.ಎಸ್.ಚಾಂದ್‌ಬಾಷ, ಲಡ್ಡು ಹೊನ್ನೂರವಲಿ, ಎಂ.ಉಸ್ಮಾನ್, ವೈ. ಅಬ್ದುಲ್ ಮುನಾಫ್ ಸೇರಿ ಇತರರಿದ್ದರು.

# SSLC ಈ ಬಾರಿ ಫಲಿತಾಂಶ ನಮ್ಮದೆ ಹೈಸ್ಕೋರ್‌ಗೆ ಈಗಿಂದಲೇ ಅಭ್ಯಾಸ ಮಾಡಿ

HAMPI TIMES MARGADARSHI

ಮನಸ್ಸು ಮಾಡು - ಕರ್ತವ್ಯ ನಿಷ್ಟನಾಗು - ಕಾದು ನೋಡು

ಹಂಪಿ ಟೈಮ್ಸ್ ಇ–ಪೇಪರ್‌ಗಾಗಿ ಭೇಟಿ ನೀಡಿ: https://epaper.hampitimes.com

ಹಂಪಿ ಟೈಮ್ಸ್ ಮಾರ್ಗದರ್ಶಿ SSLC: ಹಿಂದಿ

**10 ನೇ ತರಗತಿ** **ಹಿಂದಿ**

**रचना भाग**

**1) गध्यांश को ध्यानपूर्वक पढकर निम्नलिखित प्रश्नों के उत्तर लिखिए: 1 x 4 = 4**

**1)** मनुष्य सामाजिक प्राणी है । वह सभी कार्य अपने आप नही कर सकता है । वह दूसरों की सहायता लेता है । समाज में उसे अच्छे लोगों के साथ-साथ बुरे लोग भी मिलते है । यदि वह अच्छे लोगों की संगती में रहेगा तो उस पर अच्छा प्रभाव पडेगा। बुरे लोगों की संगती का बुरा प्रभाव पडता है । बुरे लोग स्वयं अपनी हानि करते हैं और समाज को भी नुकसान पहुँचाते है। मनुष्य को चाहिए कि वह अच्छे लोगों के साथ उठे - बैठे और अच्छा फल प्राप्त करे ।

अ) मनुष्य कैसा प्राणी है ?
आ) समाज में किस तरह के लोग रहते हैं ?
इ) अच्छे लोगों की संगती से क्या होता है ?
ई) अच्छा फल कैसे प्राप्त हो सकता है ?

---

**2)** स्काउट शिक्षा द्वारा विद्यार्थी गण आत्मशासन की परिपाटी सीखते हैं । वे नि: स्वार्थ भाव से दूसरों की सहायता करना, स्वावलंबन, देशप्रेम, सेवाधर्म आदि उच्च आदर्शों को प्राप्त कर लेते हैं । स्काउट संस्था ऐसे- ऐसे खेल सिखाती है, जिसने शारीरिक क्षामता तो आएगी, साथ ही बुद्धि भी तीव्र होती जाएगी । वह ऐसी-ऐसी पद्धतियाँ बताती है कि जनता की सेवा सुगमतापूर्वक हो सकें । जैसे आग बुझाने की रीति, पानी में डूबते हुए को निकालने की तरकीबें, जख्मी आदमी की प्रारंभिक चिकित्सा आदि ।

A) स्काउट शिक्षा के द्वारा विद्यार्थी गण क्या सीखते हैं ?
B) स्काउट शिक्षा के द्वारा किस आदर्शों को प्राप्त करते हैं ?
C)स्काउट शिक्षा से बुद्धि कैसे तीव्र हो जाएगी ?
D) स्काउट शिक्षा जनता की सेवा में सुगमतापूर्वक होने के लिए कौन- सी पद्धतियाँ सीखाती है ?

---

**3)** लोभ बहुत बडा दुर्गुण है । यह एक असाध्य रोग है । दु:ख का मूल कारण ही लोभ है । धनी आदमी अधिक धन कमाने के प्रयत्न में लोभी बन जाता है । प्राप्त धन से वह कभी संतुष्ट नही हो पाता । भूखा पेटभर खाना मिलने पर तृप्त हो जाता है । लोभी की दुराशाएँ बढती ही जाती है, इसलिए बह हमेशा अतृप्त ही रहता है । लोभ बीमारी का लक्षण है संतोष निरोगता का लक्षण है । इसलिए मनुष्य को कभी लोभ छोडकर , प्राप्त है उसी में संतुष्ट रहना चाहिए ।

क) धनी आदमी क्यों लोभी बन जाता है ?
ख) भूखा आदमी कैसे तृप्त हो जाता है ?
ग) लोभी हमेशा क्यों अतृप्त रहता है ?
घ) मनुष्य कैसे संतुष्ट रह सकता है ?

---

**4)** साहित्य दो प्रकार में दिखाई देता है । शिष्ट साहित्य और जनपद साहित्य । ज्ञानी और शास्त्रज्ञ जिस साहित्य का सृजन करते हैं उसे शिष्ट साहित्य कहा जाता है । शिष्ट साहित्य लिखित होता है। जनपद साहित्य अलिखित होता है । इसकी रक्षा मौखिक परंपरा से होती है । ज्यादातर जनपद साहित्य ग्रामों में जन्म लेते है ।

क ) साहित्य के दो प्रकार कौन- कौन से हैं ?
ख ) शिष्ट साहित्य का सृजन कैसे होता है ?
ग ) जनपद साहित्य क्या है ?
घ ) जनपद साहित्य का जन्म कहाँ हुआ ?

( ವಿ ಸೂ : ಈ ಮೇಲಿನ ಪ್ರಶ್ನೆಗಳಿಗೆ ಉತ್ತರ ಬರೆದು ನಿಮ್ಮ ಗುರುಗಳಿಗೆ ತೋರಿಸಿ. )

ಮಾರ್ಗದರ್ಶಿ ಶಿಕ್ಷಕರು : **ಹೆಚ್.ತುಕಾರಾಮ್ ನಾಯ್ಕ**, ಶಿಕ್ಷಕರು, ಸರ್ಕಾರಿ ಪ್ರೌಢಶಾಲೆ, ಮಗಿಮಾವಿನಹಳ್ಳಿ, ಹ.ಬೊ.ಹಳ್ಳಿ (ತಾ) ವಿಜಯನಗರ (ಜಿಲ್ಲೆ)

**ಶ್ರೀ ಜಗದ್ಗುರು ಕೊಟ್ಟೂರುಸ್ವಾಮಿ ಸಂಸ್ಥಾನಮಠ, ಹೊಸಪೇಟೆ**


• Admissions
• Requirements
• Firm Branding
• Public Notice
• Change of Name

BOOK NOW!

Book Your Advertisements
in Leading Local HAMPI TIMES
Print & Digital News Paper
9482599089 / 9448633038

• Obituary
• Remembrance
• Birthday wish ads
• Events Display &
• Classified ads

SHUBHA Ads C/o HAMPI TIMES, Bamboo Bazaar, Nr Valmiki Circle, Hosapete-583201 Vijayanagara Dist.



## ತುಂಗಭದ್ರಾ ನೀರಿನ ಮಟ್ಟ

ಶುಕ್ರವಾರ : 03–01–2025

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1625.86 ಅಡಿ |
| ಒಳ ಹರಿವು | 140 ಕ್ಯುಸೆಕ್ |
| ಹೊರ ಹರಿವು | 8818 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 79.334 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| ಕಳೆದ ವರ್ಷ ಇದೇ ದಿನ | |
| ಇಂದಿನ ಮಟ್ಟ | 1589.06 ಅಡಿ |
| ಒಳ ಹರಿವು | 0 ಕ್ಯುಸೆಕ್ |
| ಹೊರ ಹರಿವು | 0 ಕ್ಯುಸೆಕ್ |
| ಸಾಮರ್ಥ್ಯ | 10.262 ಟಿಎಂಸಿ |

## ನಿತ್ಯ ಪಂಚಾಂಗ

ಮಾಸ: ಪುಷ್ಯ । ಸಂವತ್ಸರ: ಕ್ರೋಧಿ

04–01–2025 – ಶನಿವಾರ

| | |
|---|---|
| ತಿಥಿ | : ಪಂಚಮಿ |
| ಪಕ್ಷ | : ಶುಕ್ಲ |
| ನಕ್ಷತ್ರ | : ಶತಭಿಷ |
| ಯೋಗ | : ಸಿದ್ಧಿ |
| ಕರಣ | : ಭವ |
| ಸೂರ್ಯೋದಯ | : 07:10:24 |
| ಸೂರ್ಯಾಸ್ತ | : 17:53:40 |
| ರಾಹು ಕಾಲ | : 09:51–11:12 |
| ಯಮಘಂಡ ಕಾಲ | : 13:52–15:13 |
| ಗುಳಿಕ ಕಾಲ | : 07:10–08:31 |

## ಟಿ.ಎಸ್.ವೀರಣ್ಣ ನಿಧನ

**ಕೊಟ್ಟೂರು:** ವೀರಶೈವ ಲಿಂಗಾಯತ ಪಂಚಮಸಾಲಿ ಸಮಾಜದ ಹಿರಿಯರು,



ವ್ಯಾಪಾರಿಗಳಾಗಿದ್ದ ಪಟ್ಟಣದ ಟಿ.ಎಸ್ ವೀರಣ್ಣ 86 ವರ್ಷ ಶುಕ್ರವಾರ ಸಂಜೆ ಲಿಂಗೈಕ್ಯರಾಗಿರುತ್ತಾರೆ.

ಮೃತರಿಗೆ ಪತ್ನಿ, ಓರ್ವ ಪತ್ರ, ಪುತ್ರಿ ಹಾಗೂ ಅಪಾರ ಬಂಧು ಬಳಗವಿದೆ. ಕೊಟ್ಟೂರು ಪಟ್ಟಣದ ವೀರಶೈವ ರುದ್ರಭೂಮಿಯಲ್ಲಿ ಶನಿವಾರ ಬೆಳಿಗ್ಗೆ 11 ಗಂಟೆ ಮೃತರ ಅಂತ್ಯ ಸಂಸ್ಕಾರ ನೆರವೇರಲಿದೆ ಎಂದು ಕುಟುಂಬದ ಸದಸ್ಯರು ತಿಳಿಸಿದ್ದಾರೆ.

For Events Coverage
Contact
94486 33038

# ಕಾಲಮಿತಿಯೊಳಗೆ ಏತ ನೀರಾವರಿ ಕಾಮಗಾರಿಗಳು ಪೂರ್ಣಗೊಳ್ಳಬೇಕು

## ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಎನ್. ಎಸ್. ಭೋಸರಾಜು ಸೂಚನೆ



■ **ಹಂಪಿ ಟೈಮ್ಸ್ ಕೊಪ್ಪಳ**

ಯಾವುದೇ ಕೆಲಸ ಮತ್ತು ಕಾಮಗಾರಿಗಳು ಕಾಲಮಿತಿಯಲ್ಲಿ ಮುಗಿಯಬೇಕಾದರೆ ನಿರಂತರವಾಗಿ ಕೆಲಸ ಮಾಡಬೇಕು ಅಂದಾಗ ಮಾತ್ರ ಅವುಗಳು ಬೇಗನೆ ಮುಗಿಯುತ್ತವೆ ಎಂದು ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ಹಾಗೂ ಕರ್ನಾಟಕ ವಿಧಾನ ಪರಿಷತ್ ಸಭಾ ನಾಯಕರಾದ ಎನ್. ಎಸ್. ಭೋಸರಾಜು ಹೇಳಿದರು.

ಅವರು ಶುಕ್ರವಾರ ಕೊಪ್ಪಳ ತಾಲ್ಲೂಕಿನ ನಾರಾಯಣಪೇಟೆ ಗ್ರಾಮದ ಕೊಪ್ಪಳ–ಯಲಬುರ್ಗಾ ಕೆರೆ ತುಂಬಿಸುವ ಯೋಜನೆಯ ಮೊದಲ ಹಂತದ ಕಾಮಗಾರಿಯ ಜಾಕವೆಲ್ ಮತ್ತು ಪಂಪಹೌಸ್ ಪರಿವೀಕ್ಷಣೆ ನಂತರ ಮಾಧ್ಯಮ ಪ್ರತಿನಿಧಿಗಳಿಗೆ ಮಾಹಿತಿ ನೀಡಿ ಮಾತನಾಡಿದರು.

ಕೊಪ್ಪಳ–ಯಲಬುರ್ಗಾ ಕೆರೆ ತುಂಬಿಸುವ ಯೋಜನೆಯ ಮೊದಲ ಹಂತದ ಕಾಮಗಾರಿ ಇದಾಗಿದ್ದು 6 ಕೆರೆಗಳನ್ನು 2.83 ಕೋಟಿ ವೆಚ್ಚದಲ್ಲಿ ಮಾಡಲಾಗುತ್ತಿದೆ. ಈಗಾಗಲೇ ಈ ಭಾಗದಲ್ಲಿನ ಸಮಸ್ಯೆಗಳನ್ನು ರಿವ್ಯೂವ್ ಮಾಡಲು ಎರಡು ಸಲ ಸಭೆಗಳನ್ನು ಮಾಡಲಾಗಿದೆ. ಇದರ ಜೊತೆಗೆ ಕೊಪ್ಪಳ ಜಿಲ್ಲೆಯ ಹುಲಗಿ ಗ್ರಾಮದ ಹತ್ತಿರ ಇರುವ ಹಿರೇಹಳ್ಳ ಏತ ನೀರಾವರಿ ಯೋಜನೆ ಹಾಗೂ ಕೆರೆ ತುಂಬಿಸುವ ಕಾಮಗಾರಿಗಳು, ಭಾಣಾಪೂರ ಗ್ರಾಮದಲ್ಲಿ ಕೊಪ್ಪಳ–ಯಲಬುರ್ಗಾ ಕೆರೆ ತುಂಬಿಸುವ ಏತ ನೀರಾವರಿ ಯೋಜನೆ, ಕಡೆಕೊಪ್ಪ ಗ್ರಾಮದಲ್ಲಿ ಕುಷ್ಟಗಿ ಏತ ನೀರಾವರಿ ಯೋಜನೆ, ಈ ಎಲ್ಲಾ ಕಾಮಗಾರಿಗಳ ಪರಿವೀಕ್ಷಣೆ ನಂತರ ಶನಿವಾರ ಅಧಿಕಾರಿಗಳೊಂದಿಗೆ ಸಭೆ ನಡೆಸಲಿದ್ದೇನೆ ಎಂದು ಹೇಳಿದರು.

ಕೃಷ್ಣ–ಕಾವೇರಿ ಬೇಸಿನ ಕಾಮಗಾರಿಗಳನ್ನು ಒಂದು ವರ್ಷದಲ್ಲಿ ಮುಗಿಸುವಂತೆ ಹಾಗೂ ಕೆಲಸದ ವೇಗ ಹೆಚ್ಚಿಸುವಂತೆ ಮಾಡಲಾಗುತ್ತಿದೆ. ನಮ್ಮ ಭಾಗದಲ್ಲಿಯ ಕಾಮಗಾರಿಗಳೂ ಕಾಲಮಿತಿಯಲ್ಲಿ ನಡೆಯಬೇಕು ಎಂಬ ಉದ್ದೇಶಕ್ಕಾಗಿ ವಿವಿಧ ಕಾಮಗಾರಿಗಳ ಪರಿವೀಕ್ಷಣೆಗೆ ಬಂದಿದ್ದೇನೆ. ಕಾಲಮಿತಿಯಲ್ಲಿ ಕೆಲಸ ಮಾಡದ ಗುತ್ತಿಗೆದಾರರಿಗೆ ಪೆನಾಲ್ಟಿ ಹಾಕಲಾಗುತ್ತದೆ. ಗುತ್ತಿಗೆದಾರರು ಕೆಲಸವನ್ನು ಕಾಲಮಿತಿಯಲ್ಲಿ ಮುಗಿಸಿದಾಗ ಯಾವುದೇ ಸಮಸ್ಯೆಗಳಾಗುವುದಿಲ್ಲ ವಿಳಂಬವಾದರೆ ಇನ್ನೂ ಬೇರೆ ಸಮಸ್ಯೆಗಳು ಉಂಟಾಗುತ್ತವೆ ಎಂದು ಹೇಳಿದರು.

ಕೊಪ್ಪಳ–ಯಲಬುರ್ಗಾ ಕೆರೆ ತುಂಬಿಸುವ ಯೋಜನೆಯ ಮೊದಲ ಹಂತದ ಕಾಮಗಾರಿಯ ಜಾಕವೆಲ್ ಮತ್ತು ಪಂಪಹೌಸ್ ಪರಿವೀಕ್ಷಣೆ ಸಂದರ್ಭದಲ್ಲಿ ಸಚಿವರು ಯಾವ ತಿಂಗಳಲ್ಲಿ ಎಷ್ಟು ಕೆಲಸ ಮುಗಿಸಬೇಕು ಎಂದು ಮುಂಚಿತವಾಗಿ ತಮಲ್ಲಿ ಒಂದು ಯೋಜನೆ ಇರಬೇಕು. 18 ತಿಂಗಳಲ್ಲಿ ಮುಗಿಸುವ ಕೆಲಸವನ್ನು 6 ವರ್ಷ ಮಾಡಿದರೆ ಹೇಗೆ ಇದನ್ನು ಆದಷ್ಟು ಬೇಗನೆ ಮುಗಿಸಿ ವರದಿ ನೀಡುವಂತೆ ಸಂಬಂಧಿಸಿದ ಇಲಾಖೆಯ ಅಧಿಕಾರಿಗಳು ಮತ್ತು ಗುತ್ತಿಗೆದಾರರಿಗೆ ಸೂಚನೆ ನೀಡಿದರು.

ಈ ಸಂದರ್ಭದಲ್ಲಿ ಕೊಪ್ಪಳ ಸಂಸದರಾದ ಕೆ. ರಾಜಶೇಖರ ಬಸವರಾಜ ಹಿಟ್ನಾಳ, ಸಣ್ಣ ನೀರಾವರಿ ಇಲಾಖೆಯ ಕಾರ್ಯದರ್ಶಿ ರಾಘವನ್, ಮುಖ್ಯ ಇಂಜಿನಿಯರ್ ಜಗದೀಶ್ ರಾಥೋಡ್, ಅಧೀಕ್ಷಕ ಇಂಜಿನಿಯರ್ ಲಿಂಗರಾಜ್, ಇಇ ಬಿ.ಎಸ್.ಪಾಟೀಲ್, ಇಇ ಶ್ರವಣಕುಮಾರ, ಎಇಇ.ಗಳಾದ ಜೆ.ಎನ್. ಜೋಳಗೊಂಡ, ದೇವೇಂದ್ರಪ್ಪ ಹಾಗೂ ರಶ್ಮೀ, ಜೂನಿಯರ್ ಇಂಜಿನಿಯರ್ ಪ್ರಕಾಶ ಪಾಟೀಲ್ ಸೇರಿದಂತೆ ಇತರೆ ಅಧಿಕಾರಿಗಳು, ಗುತ್ತಿಗೆದಾರರು ಹಾಗೂ ಜನಪ್ರತಿನಿಧಿಗಳು ಉಪಸ್ಥಿತರಿದ್ದರು.

# ಅಲೆಮಾರಿ, ಅರೆಅಲೆಮಾರಿ ಜಿಲ್ಲಾ ಮಟ್ಟದ ಸಮಿತಿಯ ನಾಮನಿರ್ದೇಶಿತ ಸದಸ್ಯತ್ವಕ್ಕೆ ಅರ್ಜಿ ಆಹ್ವಾನ

■ **ಹಂಪಿ ಟೈಮ್ಸ್ ಹೊಸಪೇಟೆ**

ಅಲೆಮಾರಿ, ಅರೆ ಅಲೆಮಾರಿ ಜನಾಂಗದವರಿಗೆ ಸೌಲಭ್ಯ ಹಾಗೂ ಮೀಸಲಾತಿ ಕಲ್ಪಿಸುವಲ್ಲಿ ಜಿಲ್ಲಾ ಮಟ್ಟದ ಸಲಹಾ ಸಮಿತಿ ನಾಮನಿರ್ದೇಶಿತ ಸದಸ್ಯತ್ವಕ್ಕೆ ಅರ್ಜಿ ಅಹ್ವಾನಿಸಲಾಗಿದೆ ಎಂದು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಜಿಲ್ಲಾ ಅಧಿಕಾರಿ ಕೆ.ಬಿ.ರಾಮಚಂದ್ರಪ್ಪ ತಿಳಿಸಿದ್ದಾರೆ.

ಕೇಂದ್ರ ಸರ್ಕಾರದ ಆರ್ಥಿಕ ನೆರವಿನೊಂದಿಗೆ ಕಲ್ಯಾಣ ಕಾರ್ಯಕ್ರಮಗಳನ್ನು ಜಾರಿಗೊಳಿಸಲು ಅಲೆಮಾರಿ ಜನಾಂಗದ ರಾಜ್ಯ ಹಾಗೂ ತಾಲೂಕು ಮಟ್ಟದ ಸಲಹಾ ಸಮಿತಿ, ಪ್ರಗತಿ ಪರಿಶೀಲನಾ ಸಮಿತಿಯನ್ನು ರಚಿಸಲಾಗಿರುತ್ತದೆ. ಅದರಂತೆ ವಿಜಯನಗರ ಜಿಲ್ಲೆಯ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ವತಿಯಿಂದ ಜಿಲ್ಲಾ ಮಟ್ಟದ ಸಲಹಾ, ಪರಿಶೀಲನಾ ಸಮಿತಿಗೆ ಅಲೆಮಾರಿ, ಅರೆಅಲೆಮಾರಿ ಸಮುದಾಯಕ್ಕೆ ಸೇರಿದ ಒಬ್ಬರು ಸದಸ್ಯರನ್ನು ಆಯ್ಕೆ ಮಾಡಬೇಕಾಗಿರುವ ನಿಟ್ಟಿನಲ್ಲಿ ಮೂರು ವರ್ಷಗಳ ಅವಧಿಗೆ ಒಬ್ಬ ನಾಮನಿರ್ದೇಶನ ಸದಸ್ಯರನ್ನು ನೇಮಕ ಮಾಡಲು ಆಸಕ್ತರಿಂದ ಅರ್ಜಿಯನ್ನು ಆಹ್ವಾನಿಸಲಾಗಿದೆ. ಆಸಕ್ತಿ ಹೊಂದಿರುವ ಅಭ್ಯರ್ಥಿಗಳು ನಿಗಧಿತ ಸಮುದಾಯದ ವಿಜಯನಗರ ಜಿಲ್ಲೆಯ ನಿವಾಸಿಯಾಗಿರಬೇಕು. ಎಸ್ಸೆಸ್ಸೆಲ್ಸಿ ವಿದ್ಯಾಭ್ಯಾಸ ಹೊಂದಿರಬೇಕು. ಕನಿಷ್ಠ 35 ವರ್ಷದಿಂದ ಗರಿಷ್ಠ 65 ವರ್ಷ ವಯೋಮಿತಿಯೊಳಗಿರಬೇಕು. ಲಿಖಿತ ಅರ್ಜಿಯನ್ನು ಹಾಗೂ ಅಗತ್ಯ ಪೂರಕ ದಾಖಲೆಗಳನ್ನು ಲಗತ್ತಿಸಿ ಜಿಲ್ಲಾ ಅಧಿಕಾರಿಗಳು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಹೊಸಪೇಟೆ ಇವರಿಗೆ ಸಲ್ಲಿಸಬೇಕು ಹೆಚ್ಚಿನ ಮಾಹಿತಿಗಾಗಿ 9141827465 ಸಂಖ್ಯೆಗೆ ಸಂಪರ್ಕಿಸಬೇಕೆಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಸುರಕ್ಷಿತ ಹೆರಿಗೆಗೆ ಕಬ್ಬಿಣಾಂಶ ಮಾತ್ರೆಗಳ ಸೇವನೆ ಅಗತ್ಯ

## ಡಿಎಚ್‌ಒ ಡಾ.ಯಲ್ಲಾ ರಮೇಶಬಾಬು ಹೇಳಿಕೆ । ವಲಸೆ ಪ್ರದೇಶಕ್ಕೆ ಭೇಟಿ ನೀಡಿ ಗರ್ಭಿಣಿ ಆರೋಗ್ಯ ವಿಚಾರಣೆ

■ **ಹಂಪಿ ಟೈಮ್ಸ್ ಬಳ್ಳಾರಿ**

ಕಬ್ಬಿಣಾಂಶ ಮಾತ್ರೆಗಳ ಸೇವನೆಯಿಂದ ಗರ್ಭಿಣಿಯರಲ್ಲಿ ರಕ್ತಹೀನತೆ ಕಡಿಮೆ ಮಾಡುವುದರ ಜೊತೆಗೆ ಹೆರಿಗೆ ಸಮಯದಲ್ಲಿ ಹೆಚ್ಚುವರಿ ರಕ್ತದ ಅವಶ್ಯಕತೆಯನ್ನು ತಪ್ಪಿಸುತ್ತದೆ ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಯಲ್ಲಾ ರಮೇಶಬಾಬು ಅವರು ಹೇಳಿದರು.

ಕುರುಗೋಡು ತಾಲ್ಲೂಕಿನ ಯಲ್ಲಾಪುರ ಕ್ರಾಸ್ ಬಳಿ ವಾಸವಿರುವ ಹಂಡಿಜೋಗಿ ಸಮುದಾಯದ ವಲಸೆ ಪ್ರದೇಶಕ್ಕೆ ಭೇಟಿ ನೀಡಿ ಗರ್ಭಿಣಿ ಮಹಿಳೆಯರೊಂದಿಗೆ ಆರೋಗ್ಯ ವಿಚಾರಿಸಿ ಅವರು ಮಾತನಾಡಿದರು.

ಕಬ್ಬಿಣಾಂಶ ಮಾತ್ರೆ ನುಂಗಿದರೆ ಭ್ರೂಣ ದಪ್ಪವಾಗುತ್ತದೆ, ಕಪ್ಪು ಬಣ್ಣದ ಮಗು ಹುಟ್ಟುತ್ತದೆ ಎಂಬ ತಪ್ಪು ನಂಬಿಕೆ, ಗಾಳಿಸುದ್ದಿಗಳನ್ನು ನಂಬದೇ, ವೈದ್ಯರ ಸಲಹೆಯಂತೆ ಉಚಿತವಾಗಿ ನೀಡುವ ಕಬ್ಬಿಣಾಂಶ ಮಾತ್ರೆಗಳನ್ನು ಪ್ರತಿದಿನ ಒಂದರಂತೆ ಕನಿಷ್ಟ 180 ಮಾತ್ರೆ, ರಕ್ತಹೀನತೆಯ ಪ್ರಮಾಣ ತೀವ್ರವಾಗಿದ್ದಲ್ಲಿ ದಿನಕ್ಕೆ 2 ರಂತೆ 360 ಮಾತ್ರೆಗಳನ್ನು 6 ತಿಂಗಳ ಅವಧಿಗೆ ಸೇವಿಸಬೇಕು ಎಂದು ಅವರು ತಿಳಿಸಿದರು.



ಗರ್ಭಿಣಿ ಎಂದು ತಿಳಿದ ನಂತರ ರಕ್ತದಲ್ಲಿ ಕಬ್ಬಿಣಾಂಶ ಹೆಚ್ಚಿಸಿ ಗರ್ಭಿಣಿಯು ಲವಲವಿಕೆಯಿಂದ ಇರಲು, ಗರ್ಭದಲ್ಲಿ ಭ್ರೂಣದ ಸರಿಯಾದ ಬೆಳವಣಿಗೆಗೆ ಮತ್ತು ಸುರಕ್ಷಿತ ಹೆರಿಗೆಗೆ ಸಹಕಾರಿಯಾಗುತ್ತದೆ. ಕುಟುಂಬದ ಸದಸ್ಯರು ಆರೋಗ್ಯ ಇಲಾಖೆಯಿಂದ ನೀಡುವ ಕಬ್ಬಿಣಾಂಶ ಮಾತ್ರೆಗಳನ್ನು ತಪ್ಪದೇ ಗರ್ಭಿಣಿಗೆ ನುಂಗಿಸಬೇಕು ಎಂದು ಅವರು ಮನವರಿಕೆ ಮಾಡಿದರು.

ಮುಖ್ಯವಾಗಿ ಗಂಡಾಂತರ ಗರ್ಭಿಣಿಯರು ಎಂದು ಗುರ್ತಿಸಿದ ನಂತರ ಚೊಚ್ಚಲ ಗರ್ಭಿಣಿ, ಎತ್ತರ ಕಡಿಮೆ, ಅಧಿಕ ರಕ್ತದೊತ್ತಡ, ರಕ್ತದಲ್ಲಿ ಕಬ್ಬಿಣಾಂಶ ಕೊರತೆ, ಅವಳಿ–ಜವಳಿ ಗರ್ಭಿಣಿ, ವಿವಾಹವಾಗಿ ಐದಕ್ಕಿಂತ ಹೆಚ್ಚು ವರ್ಷಗಳ ನಂತರ ಗರ್ಭಿಣಿಯಾಗಿರುವುದು, ಮೊದಲ ಹೆರಿಗೆ ಸಿಸೇರಿಯನ್ ಮುಂತಾದ ಕಾರಣಗಳಿದ್ದರೆ ನಿರ್ಲಕ್ಷಿಸಬಾರದು.

ತೀವ್ರ ರಕ್ತಹೀನತೆಯಂತಹ ಸನ್ನಿವೇಶದಲ್ಲಿ ಸ್ಥಳೀಯವಾಗಿ ನೀಡುವ ಚಿಕಿತ್ಸೆ (ಐಎಫ್‌ಎ ಮಾತ್ರೆ, ಐರನ್ ಸುಕ್ರೋಸ್, ರಕ್ತ ಹಾಕಿಸುವಿಕೆ) ಪಡೆಯಬೇಖು. ಸುಧಾರಣೆಯಾಗದಿದ್ದಲ್ಲಿ ತಜ್ಞರ ಬಳಿ ತಪ್ಪದೇ ಭೇಟಿ ನೀಡಬೇಕು. ಅಗತ್ಯವಿದ್ದಲ್ಲಿ ಸ್ಕ್ಯಾನ್ ಮಾಡಿಸಬೇಕು. ಮೊದಲ ಹೆರಿಗೆ ಶಸ್ತ್ರಚಿಕಿತ್ಸೆ ಮೂಲಕವಾದಲ್ಲಿ ಪುನಃ ಗರ್ಭಿಣಿಯಾಗುವ ಅವಧಿಯನ್ನು ಕನಿಷ್ಠ 3 ವರ್ಷಕ್ಕೆ ಕಡ್ಡಾಯವಾಗಿ ಮುಂದೂಡಬೇಕು. ಇದಕ್ಕಾಗಿ ಅಂತರ ಚುಚ್ಚುಮದ್ದು, ಕಾಪರ್–ಟಿ, ನಿರೋಧ್ ಬಳಸಲು ಸೂಚಿಸಿದರು.

ಈ ಸಂದರ್ಭದಲ್ಲಿ ಕುರುಗೋಡು ತಾಲ್ಲೂಕು ಆರೋಗ್ಯ ಮೇಲ್ವಿಚಾರಣಾಧಿಕಾರಿ ಡಾ. ಮಂಜುನಾಥ ಜವಳಿ, ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಈಶ್ವರ ಹೆಚ್ ದಾಸಪ್ಪನವರ, ಆರೋಗ್ಯ ಮೇಲ್ವಿಚಾರಣಾಧಿಕಾರಿ ವಿರುಪಾಕ್ಷಪ್ಪ, ಹಿರಿಯ ಪ್ರಾಥಮಿಕ ಆರೋಗ್ಯ ಸುರಕ್ಷಣಾಧಿಕಾರಿ ರೇಣುಕಾ, ಆಶಾ ಕಾರ್ಯಕರ್ತೆ ಕಾವೇರಿ, ಅಂಗನವಾಡಿ ಕಾರ್ಯಕರ್ತೆ ಆಶಾಕುಮಾರಿ ಮತ್ತು ಸ್ಥಳೀಯರು ಉಪಸ್ಥಿತರಿದ್ದರು.

## ಜ.13 ಜಿಲ್ಲಾ ಮಟ್ಟದ ದಿಶಾ ಸಮಿತಿ ಸಭೆ

■ **ಹಂಪಿ ಟೈಮ್ಸ್ ಬಳ್ಳಾರಿ**

ಜಿಲ್ಲಾ ಪಂಚಾಯತ್ ವತಿಯಿಂದ ಜಿಲ್ಲಾ ಅಭಿವೃದ್ಧಿ ಸಮನ್ವಯ ಉಸ್ತುವಾರಿ ಸಮಿತಿ “ದಿಶಾ” ಸಮಿತಿಯ ದ್ವಿತೀಯ ತ್ರೈಮಾಸಿಕ ಸಭೆಯನ್ನು ಜ.13 ರಂದು ಬೆಳಿಗ್ಗೆ 11 ಗಂಟೆಗೆ ಜಿಲ್ಲಾ ಪಂಚಾಯತ್‌ನ ನಜೀರ್‌ಸಾಬ್ ಸಭಾಂಗಣದಲ್ಲಿ ನಡೆಸಲು ನಿಗದಿಪಡಿಸಲಾಗಿದೆ ಎಂದು ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಕಾಧಿಕಾರಿ ಹಾಗೂ ದಿಶಾ ಸಮಿತಿಯ ಸದಸ್ಯ ಕಾರ್ಯದರ್ಶಿಯೂ ಆದ ರಾಹುಲ್ ಶರಣಪ್ಪ ಸಂಕನೂರು ಅವರು ತಿಳಿಸಿದ್ದಾರೆ.

ಬಳ್ಳಾರಿ ಲೋಕಸಭಾ ಕ್ಷೇತ್ರದ ಸಂಸದರು ಹಾಗೂ ಜಿಲ್ಲಾ ಮಟ್ಟದ ದಿಶಾ ಸಮಿತಿಯ ಅಧ್ಯಕ್ಷರೂ ಆದ ಈ.ತುಕಾರಾಂ ಅವರು ಸಭೆಯ ಅಧ್ಯಕ್ಷತೆ ವಹಿಸುವರು. ಸಭೆಗೆ ಸಂಬಂಧಪಟ್ಟ ಇಲಾಖಾ ಅಧಿಕಾರಿಗಳು ಅಗತ್ಯಪೂರ್ಣ ಮಾಹಿತಿಯೊಂದಿಗೆ ತಪ್ಪದೇ ಹಾಜರಾಗಬೇಕು ಎಂದು ಅವರು ತಿಳಿಸಿದ್ದಾರೆ.

## ರಾಜ್ಯ ಮಾನವ ಹಕ್ಕುಗಳ ಆಯೋಗದಿಂದ ಪ್ರವಾಸ ಕಾರ್ಯಕ್ರಮ

■ **ಹಂಪಿ ಟೈಮ್ಸ್ ಬಳ್ಳಾರಿ**

ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗದ ಅಧ್ಯಕ್ಷರಾದ ಟಿ.ಶ್ಯಾಮ್ ಭಟ್ ಹಾಗೂ ನ್ಯಾಯಾಂಗ ಸದಸ್ಯರಾದ ಎಸ್.ಕೆ. ವಂಟಿಗೋಡಿ ಅವರು ಜ.08 ಮತ್ತು 09 ರಂದು ಬಳ್ಳಾರಿ ಜಿಲ್ಲೆಯಲ್ಲಿ ಪ್ರವಾಸ ಕೈಗೊಳ್ಳುವರು.

ಜ.08 ರಂದು ಮಧ್ಯಾಹ್ನ ಬೆಂಗಳೂರಿನಿಂದ ಹೊರಟು, ಸಂಜೆ 07.30 ಗಂಟೆಗೆ ಬಳ್ಳಾರಿಗೆ ಆಗಮಿಸುವರು. ಬಳಿಕ ಜಿಂದಾಲ್‌ನ ಸರ್ಕ್ಯೂಟ್ ಹೌಸ್‌ನಲ್ಲಿ ವಾಸ್ತವ್ಯ ಮಾಡುವರು.

ಜ.09 ರಂದು ಬೆಳಿಗ್ಗೆ 10 ಗಂಟೆಯಿಂದ ಮಧ್ಯಾಹ್ನ 01 ಗಂಟೆಯವರೆಗೆ ಬಳ್ಳಾರಿಯ ವಿವಿಧ ಸ್ಥಳಗಳಿಗೆ ಭೇಟಿ ನೀಡುವರು. ಮಧ್ಯಾಹ್ನ 03.30 ಗಂಟೆಯಿಂದ ಸಂಜೆ 04.30 ಗಂಟೆಯವರೆಗೆ ಜಿಲ್ಲಾ ಮಟ್ಟದ ಅಧಿಕಾರಿಗಳೊಂದಿಗೆ ಸಂವಾದ ಸಭೆ ನಡೆಸುವರು. ಬಳಿಕ ಸಂಜೆ 04.30 ರಿಂದ 05.30 ರವರೆಗೆ ಪತ್ರಿಕಾಗೋಷ್ಠಿ ನಡೆಸುವರು.

ನಂತರ ಸಂಜೆ 06 ಗಂಟೆಗೆ ಬೆಂಗಳೂರಿಗೆ ಪ್ರಯಾಣಿಸುವರು ಎಂದು ಆಪ್ತ ಕಾರ್ಯದರ್ಶಿ ಅರುಣ್ ಪೂಜಾರ್ ಅವರು ತಿಳಿಸಿದ್ದಾರೆ.

## ಬ್ಯಾಂಕಿಂಗ್ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತರಬೇತಿ; ನೋಂದಣಿಗೆ ಆಹ್ವಾನ

■ **ಹಂಪಿ ಟೈಮ್ಸ್ ಬಳ್ಳಾರಿ**

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕರಾಮುವಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರದ ವತಿಯಿಂದ ಎಸ್‌ಬಿಐ, ಇತರ ಬ್ಯಾಂಕ್ ಅಧಿಕಾರಿಗಳ ಮತ್ತು ಗುಮಾಸ್ತರ ಹುದ್ದೆಗಳಿಗೆ ನಡೆಸುವ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಮೈಸೂರಿನ ಕೇಂದ್ರ ಕಚೇರಿಯಲ್ಲಿ 45 ದಿನಗಳ ತರಬೇತಿ ನೀಡಲು ಉದ್ದೇಶಿಸಲಾಗಿದೆ.

ಆಸಕ್ತರು ಜ.08 ರೊಳಗಾಗಿ ಬೆಳಿಗ್ಗೆ 10 ಗಂಟೆಯಿಂದ ಸಂಜೆ 4 ಗಂಟೆಯವರೆಗೆ ತಮ್ಮ ಹೆಸರನ್ನು ನೊಂದಾಯಿಸಿಕೊಳ್ಳಲು ದೂ.0821–2515944 ಗೆ ಸಂಪರ್ಕಿಸಬಹುದು ಎಂದು ಕರಾಮುವಿ ಕುಲಸಚಿವ ಪ್ರೊ. ಕೆ.ಬಿ.ಪ್ರವೀಣ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಮಾಸಿಕ ವ್ಯಾಸಂಗ ಫೆಲೋಶಿಪ್‌ಗಾಗಿ ಅರ್ಜಿ ಆಹ್ವಾನ

■ **ಹಂಪಿ ಟೈಮ್ಸ್ ಬಳ್ಳಾರಿ**

ಪ್ರಸ್ತಕ ಸಾಲಿನಲ್ಲಿ ಪ್ರಥಮ ವರ್ಷದ ಪೂರ್ಣಾವಧಿ ಪಿಹೆಚ್.ಡಿ ಅಧ್ಯಯನದಲ್ಲಿ ತೊಡಗಿರುವ ಹಿಂದುಳಿದ ವರ್ಗಗಳ ಅರ್ಹ ಹೊಸ ವಿದ್ಯಾರ್ಥಿಗಳಿಂದ ಮಾಸಿಕ ವ್ಯಾಸಂಗ ವೇತನ/ಫೆಲೋಶಿಪ್‌ಗಾಗಿ ಆಫ್–ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.

2024–25ನೇ ಸಾಲಿನಲ್ಲಿ ಪ್ರಥಮ ವರ್ಷದ ಪೂರ್ಣಾವಧಿ ಪಿಹೆಚ್.ಡಿ ಅಧ್ಯಯನ ಪ್ರಾರಂಭಿಸಿರುವ (ದಿನಾಂಕ:10–01–2024 ಮತ್ತು ಅದರ ನಂತರ ಪ್ರಥಮ ವರ್ಷದ ಪಿಹೆಚ್.ಡಿ. ಪ್ರಾರಂಭಿಸಿರಬೇಕು) ಕರ್ನಾಟಕ ರಾಜ್ಯದ ಹಿಂದುಳಿದ ವರ್ಗಗಳ ಪ್ರವರ್ಗ–1, 2(ಎ), 3(ಎ) ಹಾಗೂ 3(ಬಿ) ಗೆ ಸೇರಿದ ಅರ್ಹ ಅಭ್ಯರ್ಥಿಗಳು ಮಾಸಿಕ ವ್ಯಾಸಂಗ ವೇತನ/ಫೆಲೋಶಿಪ್‌ಗಾಗಿ ಅರ್ಜಿ ಸಲ್ಲಿಸಬಹುದು.

ಕರ್ನಾಟಕದ ಶಾಸನಬದ್ಧ ವಿಶ್ವವಿದ್ಯಾಲಯಗಳಲ್ಲಿ ಹಾಗೂ ಅಧೀನಕ್ಕೆ ಒಳಪಡುವ ಸಂಸ್ಥೆಗಳಲ್ಲಿ ಪ್ರಥಮ ವರ್ಷದ ಪಿಹೆಚ್.ಡಿ ಅಧ್ಯಯನ ಮಾಡುತ್ತಿರುವ ಹೊಸ ಅಭ್ಯರ್ಥಿಗಳು ಮಾತ್ರ ಆಫ್–ಲೈನ್ ಮೂಲಕ ಅರ್ಜಿ ಸಲ್ಲಿಸಬಹುದು.

ಅರ್ಜಿ ಸಲ್ಲಿಸಲು ಜ.20 ಕೊನೆಯ ದಿನವಾಗಿರುತ್ತದೆ. ವಿವರಗಳಿಗಾಗಿ ಇಲಾಖಾ ವೆಬ್‌ಸೈಟ್ https://bcwd.karnatakaka.gov.in ನಲ್ಲಿ ಲಭ್ಯವಿದ್ದು, ಅಭ್ಯರ್ಥಿಗಳು ಎಲ್ಲಾ ಮಾಹಿತಿಯನ್ನು ಓದಿ, ತಿಳಿದುಕೊಂಡು ನಂತರ ಅರ್ಜಿ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ ಮೊ.8050770004 ಗೆ ಸಂಪರ್ಕಿಸಬಹುದು ಎಂದು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿಯವರು ಪ್ರಕಟಣೆಯಲ್ಲಿ

## ದೌರ್ಜನ್ಯ ತಡೆ ಕಾಯ್ದೆ ಜಾಗೃತಿಗೆ ಚಾಲನೆ

■ **ಹಂಪಿ ಟೈಮ್ಸ್ ಹೊಸಪೇಟೆ:**

2024–25ನೇ ಸಾಲಿನಲ್ಲಿ ಅಸ್ಪೃಶ್ಯತಾ ನಿವಾರಣಾ ಕಾರ್ಯಕ್ರಮದ ನಿಮಿತ್ತ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಲು ಜನಜಾಗೃತಿ ಬೀದಿ ನಾಟಕಗಳನ್ನು ಪೊಲೀಸ್ ಇಲಾಖೆಯ ಯು.ದೇವೆಂದ್ರಪ್ಪ ಚಾಲನೆ ನೀಡಿದರು.

ತಾಲೂಕಿನ ಚಿಲಕನಹಟ್ಟಿ ಗ್ರಾಪಂ ವ್ಯಾಪ್ತಿಯ ತಿಮ್ಮಲಾಪುರ ಗ್ರಾಮದದಲ್ಲಿ ರಂಗಲೋಕ ಗ್ರಾಮೀಣ ಅಭಿವೃದ್ಧಿ ಸಂಸ್ಥೆಯ ಕಲಾತಂಡದ ಕಲಾವಿದರು ಕಿರುನಾಟಕ ಮತ್ತು ಜಾಗೃತಿಗೀತೆಗಳ ಮೂಲಕ ಸಾರ್ವಜನಿಕರಲ್ಲಿ ಅರಿವು ಮೂಡಿಸಿದರು. ಕಲಾವಿದರಾದ ಮಹಾಂತೇಶ್, ಸಮಾಜ ಕಲ್ಯಾಣ ಇಲಾಖೆಯ ಸಿಬ್ಬಂದಿ ಇತರರಿದ್ದರು.